
ದೆಹಲಿ ಕರ್ನಾಟಕ ಸಂಘದ

# ಅಭಿಮತ

ಏಪ್ರಿಲ್ 2019
ಬೆಲೆ ರೂ. 1



## ಉಸಿರು ನೀಡಿದ ತಾಯಿ

ಹುತಾತ್ಮ ಯೋಧರ ಸಹಾಯಾರ್ಥ ದಿನಾಂಕ 30.03.2019ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಚಿತ್ರ ಪ್ರದರ್ಶನ ಮತ್ತು ಮಾರಾಟ ಜರಗಿಸಲಾಗಿತ್ತು. ಈ ಸಂದರ್ಭದಲ್ಲಿ ಪ್ರದರ್ಶನಗೊಂಡ ಹಿರಿಯ ಚಿತ್ರ ಕಲಾವಿದ ಸುಧೀರ್ ಫಡ್ನೀಸ್ ಮತ್ತು ಕುಮಾರಿ ನಮಿತಾ ಭಟ್ ಅವರ ಆಯ್ದ ಚಿತ್ರಗಳು









ಕಲಾವಿದ ಸುಧೀರ್ ಫಡ್ನೀಸ್ ಅವರ ಚಿತ್ರಗಳು

ಕಲಾವಿದೆ ನಮಿತಾ ಭಟ್ ಅವರ ಚಿತ್ರಗಳು




ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಮತ್ತು ಕಾರ್ಪೊರೇಶನ್ ಬ್ಯಾಂಕಿನ ಡಿ.ಜಿ.ಎಂ. ಆಗಿ ನಿವೃತ್ತರಾದ ಶ್ರೀ ಶಿವಾನಂದ ಹೆಬ್ಬಾರ್ ಅವರನ್ನು ದಿನಾಂಕ 31.03.2019ರಂದು ದೆಹಲಿ ಕರ್ನಾಟಕ ಸಂಘ ಆತ್ಮೀಯವಾಗಿ ಬೀಳ್ಕೊಟ್ಟಿತು. ಹೆಬ್ಬಾರ್ ಅವರು ಜನವರಿಯಲ್ಲಿ ನಡೆದ ದೆಹಲಿ ಕನಾಟಕ ಸಂಘದ ಚುನಾವಣೆಯ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು.

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪುಟ 29 ಸಂಚಿಕೆ 7
ಏಪ್ರಿಲ್ 2019

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

# ಸಂಪಾದಕೀಯ

## ಕಲಾವಿದರ ಜೀವಪರ ಕಾಳಜಿ

ನೈಸರ್ಗಿಕ ವಿಕೋಪ, ಆಕಸ್ಮಿಕ ಮತ್ತು ಉಗ್ರಗಾಮಿಗಳ ಧಾಳಿ ಸೇರಿದಂತೆ ನಮ್ಮ ದೇಶ ಹಲವು ಬಗೆಯ ದುರಂತಗಳನ್ನು ಕಂಡಿದೆ. ಈ ಬಗೆಯ ದುರಂತಗಳಿಂದ ಸಾವು–ನೋವುಗಳು ಸಂಭವಿಸಿದಾಗ ನಮ್ಮ ಕಲಾವಿದರು ಮಾನವೀಯತೆ ಮೆರೆದು ವಿವಿಧ ರೀತಿಯಲ್ಲಿ ಸ್ಪಂದಿಸಿದ ಅನೇಕ ಉದಾಹರಣೆಗಳಿವೆ.

ಮೂರು ದಶಕಗಳ ಹಿಂದೆ ಭೋಪಾಲದಲ್ಲಿ ನಡೆದ ಅನಿಲ ದುರಂತ ಲಕ್ಷಾಂತರ ಜನರ ಸಾವು–ನೋವಿಗೆ ಕಾರಣವಾಗಿತ್ತು. ಅನೇಕರು ದೈಹಿಕ ಮತ್ತು ಮಾನಸಿಕ ಖಾಯಿಲೆಗೆ ತುತ್ತಾಗಿದ್ದರು. ಇಲ್ಲಿ ನೋವುಂಡ ಜೀವಿಗಳು ಈಗಲೂ ಅಲ್ಲಿನ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ಈ ನೋವಿಗೆ ಸ್ಪಂದಿಸಿದ ನೂರಾರು ಕಲಾವಿದರು ಇತ್ತೀಚೆಗೆ ತಮ್ಮ ಕಲಾ ಚಿತ್ರಗಳನ್ನು ಅಲ್ಲಿನ ಆಸ್ಪತ್ರೆಗಳಿಗೆ ದೇಣಿಗೆಯಾಗಿ ನೀಡಿದರು. ಅರಳುವ ಹೂವು, ಉದಯಿಸುವ ಸೂರ್ಯ ಮೊದಲಾದ ಚಿತ್ರಗಳನ್ನು ನೋಡುತ್ತಾ ಖಿನ್ನತೆಯಿಂದ ಬಳಲುತ್ತಿರುವ ಸಂತ್ರಸ್ತರು ಆ ನೋವಿನಿಂದ ಹೊರಗೆ ಬರಬಹುದು ಎಂಬ ಆಶಾಭಾವದಿಂದ ಕಲಾವಿದರು ಈ ಬಗೆಯ ಔದಾರ್ಯವನ್ನು ತೋರಿದ್ದರು.

ಇತ್ತೀಚೆಗೆ ಕಾಶ್ಮೀರದ ಪುಲ್ವಾಮದಲ್ಲಿ ನಡೆದ ಉಗ್ರರ ಧಾಳಿಯಿಂದ ಹುತಾತ್ಮರಾದ ಸೈನಿಕರ ಕುಟುಂಬದ ನೋವಿಗೆ ಮೇರು ನಟ ಅಮಿತಾಬ್ ಬಚ್ಚನ್, ಗಾಯಕಿ ಲತಾ ಮಂಗೇಶ್ಕರ್ ಮೊದಲಾದ ಕಲಾವಿದರು ಅಂತಃಕರಣದಿಂದ ಸ್ಪಂದಿಸಿದ್ದಾರೆ. ಸಂತ್ರಸ್ತ ಕುಟುಂಬಗಳಿಗೆ ತಲಾ ಐದು ಲಕ್ಷ ರೂಪಾಯಿ ನೀಡುವುದಾಗಿ ಅಮಿತಾಬ್ ಘೋಷಿಸಿದ್ದಾರೆ. ತನ್ನ ಹುಟ್ಟು ಹಬ್ಬಕ್ಕೆ ಅಭಿಮಾನಿಗಳು ಉಡುಗೊರೆ ನೀಡುವುದರ ಬದಲಿಗೆ ಸೈನಿಕರ ಕುಟುಂಬಗಳಿಗೆ ನೆರವಾಗಬೇಕು ಎಂದು ಲತಾ ಕರೆ ನೀಡಿದ್ದಾರೆ.

ಪುಲ್ವಾಮ ದುರಂತಕ್ಕೆ ದೆಹಲಿ ಸ್ಥಳೀಯ ಕಲಾವಿದರು ಸ್ಪಂದಿಸಿದ ಬಗೆ ಆದರ್ಶಮಯ. ಭರವಸೆಯ ನೃತ್ಯ ಕಲಾವಿದೆ ಕುಮಾರಿ ಕನಿಕಾ ಭಟ್ ಮತ್ತು ಆಕೆಯ ಹೆತ್ತವರು ಸೈನಿಕರ ಸಹಾಯಾರ್ಥ ನೃತ್ಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಬಯಸಿದ್ದರು. ಅದರಂತೆ ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿಯ ಗೌಡ ಸಾರಸ್ವತ ಸಮಾಜದೊಂದಿಗೆ ಸಂಪರ್ಕ ಸಾಧಿಸಿ ಅರ್ಥಪೂರ್ಣ ಕಾರ್ಯಕ್ರಮವನ್ನು ಸಂಯೋಜಿಸಿದ್ದಾರೆ. ವಿವಿಧ ಕಲಾವಿದರನ್ನು, ಸಿ.ಆರ್.ಪಿ.ಎಫ್.ನ ಅಧಿಕಾರಿಗಳನ್ನು ಒಂದೆಡೆ ಸೇರಿಸಿ ದೆಹಲಿ ಕರ್ನಾಟಕ ಸಂಘದಲ್ಲಿ ಆಯೋಜಿಸಲಾದ 'ನೃತ್ಯಾಂಜಲಿ' ಒಂದು ಸ್ಮರಣೀಯ ದಾಖಲೆ.

ಶ್ರೀಮತಿ ನಯನಾ ಭಟ್ ಅವರು ಪತಿ ಶ್ರೀ ನರೇಂದ್ರ ಭಟ್ ಜೊತೆಗೂಡಿ ಸುಮಾರು ಮೂರು ಲಕ್ಷ ಹಣ ಸಂಗ್ರಹಿಸಿ ಸೈನಿಕರ ಸಹಾಯಾರ್ಥ ನೀಡಿದ್ದಾರೆ. ಈ ಮೂಲಕ ಕಲಾ ಪ್ರೀತಿಯೊಂದಿಗೆ ಅವರು ಮಾನವೀಯತೆ ಮೆರೆದಿದ್ದಾರೆ. ಇದು ಕಲಾವಿದರ ಜೀವಪರ ಕಾಳಜಿಗೆ ಶ್ರೇಷ್ಠ ನಿದರ್ಶನ ಮತ್ತು ಇತರರಿಗೆ ಮಾದರಿಯಾಗಿದೆ.

*ಡಾ. ಅವನೀಂದ್ರನಾಥ್ ರಾವ್*

### ಮುಖಪುಟ ಚಿತ್ರ

ಪರಿಸರವಾದಿ ಸಾಲುಮರದ ತಿಮ್ಮಕ್ಕ ಅವರು ದೆಹಲಿ ಕರ್ನಾಟಕ ಸಂಘದ ಮುಂಭಾಗದಲ್ಲಿ ಸಸಿ ನೆಟ್ಟ ಅಪರೂಪದ ಕ್ಷಣಗಳು. ರಾಷ್ಟ್ರಪತಿಯವರಿಂದ ಈ ಬಾರಿ 'ಪದ್ಮಶ್ರೀ' ಪ್ರಶಸ್ತಿ ಸ್ವೀಕರಿಸಿದ ನಂತರ ಆಹ್ವಾನದ ಮೇರೆಗೆ ದೆಹಲಿ ಕರ್ನಾಟಕ ಸಂಘದ ಅಭಿನಂದನೆ ಸ್ವೀಕರಿಸಲು ತಿಮ್ಮಕ್ಕ ಅವರು ಬಂದಿದ್ದರು. ಸಂಪಾದಕರ ಪರಿಕಲ್ಪನೆಯಂತೆ ಈ ಭಾವಚಿತ್ರವನ್ನು ವಿಶೇಷವಾಗಿ ವಿನ್ಯಾಸಗೊಳಿಸಿದವರು ದೆಹಲಿಯ ಸೌಜನ್ಯ ಪ್ರಿಂಟರ್ಸ್ ಮತ್ತು ಸಂಘದ ಕಛೇರಿಯ ವ್ಯವಸ್ಥಾಪಕ ಶೇಖರ್ ಕುಂದರ್. ಚಿತ್ರವನ್ನು ಸೆರೆ ಹಿಡಿದವರು ಛಾಯಾಗ್ರಾಹಕ ಆನಂದ ಮುರಗೋಡ.

*ಪ್ರಧಾನ ಸಂಪಾದಕ*


DELHI KARNATAKA *SANGHA* Rao Tularam Marg, Sector-12, R K Puram, New Delhi-110022.
Phone: 011-26109615. 011-26104818 email:dksangha@gmail.com

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 29 ಸಂಚಿಕೆ 7
ಏಪ್ರಿಲ್ 2019, ಬೆಲೆ ರೂ. 1

ನಮ್ಮನಮ್ಮೊಳಗೆ

# ಕನ್ನಡ ಸಾರಸ್ವತ ಲೋಕದ ಮುಕುಟಮಣಿಗಳು

ತಮ್ಮ ಇಡೀ ಜೀವನವನ್ನು ಸಂಶೋಧನೆ ಮತ್ತು ಬೋಧನೆಗೆ ಸಮರ್ಪಿಸಿಕೊಂಡವರನ್ನು ಕಂಡು ಮಾತನಾಡುತ್ತ ಕಾಲ ಕಳೆಯುವುದೆ ಒಂದು ಅದ್ಭುತ ಅನುಭವ. ಅವರ ಮೆಲುಕು ಮಾತಿನ ಮೋಡಿಯಲ್ಲಿ ಸಿಲುಕಿಕೊಂಡರೆ ಯಾವುದೂ ಅನನ್ಯವಾದ ಇನ್ನೊಂದು ಪ್ರಪಂಚವೇ ನಮ್ಮೆದುರು ತೆರೆದು ನಿಲ್ಲುತ್ತದೆ. ವಿಜ್ಞಾನ, ಸಮಾಜ ಶಾಸ್ತ್ರ, ಭಾಷಾ ಶಾಸ್ತ್ರ... ಹೀಗೆ ಹತ್ತು ಹಲವಾರು ವಿಷಯಗಳ ಮೇಲೆ ಸಂಶೋಧನೆಯ ಹರವು ಹರಡಿದೆ. ಹಲವರಿಗೆ ಇವೆಲ್ಲ ತೀರಾ ನೀರಸವಾಗಿ ಕಾಣಿಸಬಹುದು. ಈ ಪಂಡಿತರಿಗೆಲ್ಲ ಬೇರೆ ಕೆಲಸವಿಲ್ಲವೇ? ಯಾವುದೊ ಒಂದು ಎಳೆಯನ್ನು ಹಿಡಿದುಕೊಂಡು ಅದರ ಕೊನೆ ಸಿಗುವ ತನಕ ಅದನ್ನು ಜಾಲಡುವ ಅವರ ಪರಿ ಇತ್ತೀಚೆಗೆ ಪಸರಿಸುತ್ತಿರುವ ಅಧುನಿಕ ಶೈಕ್ಷಣಿಕ ಕಲಿಕೆಗಳ ಪದ್ಧತಿಗಳ ಪ್ರಕಾರದಲ್ಲಿ ನಿಧಾನವಾಗಿ ತನ್ನ ಪ್ರಖರತೆಯನ್ನು ಹಲವಾರು ಕಾರಣಗಳಿಂದಾಗಿ ಕಳೆದುಕೊಳ್ಳುತ್ತಿದೆ. ಈಗ ಎಲ್ಲವನ್ನೂ ಮಾರುಕಟ್ಟೆಯ ಅಂದಾಜಿನಲ್ಲಿ ಅಳೆದು ಬಿಡುವುದು ಸಾಮಾನ್ಯವಾಗಿ ಬಿಟ್ಟಿದೆ. ಆದರೆ, ಈ ಮಾರುಕಟ್ಟೆಗಳಿಗೂ ಮೀರಿದ, ನಮ್ಮನ್ನು ಹಲವಾರು ಬಗೆಗಳಲ್ಲಿ ತಟ್ಟುವ ಈ ಸಂಶೋಧನೆಯ ಹಂದರಗಳನ್ನು ಇನ್ನೂ ಉಳಿಸಿಕೊಳ್ಳುವ ಕೆಲಸವಾಗಬೇಕಿದೆ. ನಮ್ಮ ರಾಷ್ಟ್ರಕವಿ ದಿವಂಗತ ಪ್ರೊ. ಜಿ.ಎಸ್. ಶಿವರುದ್ರಪ್ಪನವರ ಕವಿತೆಯೊಂದರ ಹಾಡಿನಲ್ಲಿ ಸಾಗಿ ಹೇಳಬೇಕೆಂದರೆ... ಯಾರೆ ಕೇಳಲಿ, ಬಿಡಲಿ ಹಕ್ಕಿ ಹಾಡುವುದನ್ನು ನಿಲಿಸುವುದು ಸಾಧ್ಯವೇ? ಅದರೆ, ಇವರಿಗೆಲ್ಲ ಗತಕಾಲವನ್ನು ವರ್ತಮಾನದೊಂದಿಗೆ ತಮ್ಮದೇ ಆದ ರೀತಿಯಲ್ಲಿ ಜೋಡಿಸುವ ಕಾಯಕದಲ್ಲಿ ಸಿಗುವ ಸಂತಸ, ಥ್ರಿಲ್, ಹಲವಾರು ಬಗೆಗಳಲ್ಲಿ ವಿಶಿಷ್ಟವಾದದ್ದು. ನಮ್ಮ ಬದುಕಿನಲ್ಲಿ ಗಳಿಸಿದ್ದನ್ನು ಮನೆ, ಮಠ, ಗಾಡಿಗಿಡಿ, ಬ್ಯಾಂಕ್ ಖಾತೆ ಹೀಗೆ ಪಟ್ಟಿ ಮಾಡುತ್ತ ಹೋಗಬಹುದು. ಹಾಗೆಂದು ಇವೆಲ್ಲ ಅಮುಖ್ಯವೆಂದಲ್ಲ. ನಮ್ಮನ್ನು ತೃಪ್ತಿಯಿಂದ ಇಡಲು ಎಷ್ಟು ಬೇಕೊ ಅಷ್ಟು ಸಾಕಲ್ಲವೇ? ಆದರೆ ಈ ಬೌದ್ಧಿಕ ಜಗತ್ತಿಗೆ ತಮ್ಮನ್ನು ಒಡ್ಡಿಕೊಂಡವರ ಅದಮ್ಯ ಜೀವನೋತ್ಸಾಹ, ಹೊಸದನ್ನು ಸದಾ ಹುಡುಕುವ ಹಂಬಲ, ಈ ಹುಡುಕುವ ಪ್ರಕ್ರಿಯೆಯಲ್ಲಿ ತೊಡಗಿಕೊಂಡವರೊಂದಿಗೆ ಸದಾ ಸಂವಾದ, ಭಿನ್ನಾಭಿಪ್ರಾಯ, ವಾಗ್ವಾದ...ಇವೆಲ್ಲ ಅವರ ಬದುಕನ್ನು, ಆಲೋಚನೆಗಳನ್ನು ಸದಾ ರೂಪಿಸುವ ಪರಿಕರಗಳಾಗಿ ಬಿಡುತ್ತವೆ.

ಕನ್ನಡ ಸಾರಸ್ವತ ಲೋಕದ ಮೂರು ಮುಕುಟಮಣಿಗಳಾದ ಶ್ರೀಯುತರಾದ ಪ್ರೊ. ಚಿದಾನಂದಮೂರ್ತಿ, ಪ್ರೊ. ಷಟ್ಟರ್ ಮತ್ತು ವೆಂಕಟಾಚಲ ಶಾಸ್ತ್ರಿಗಳವರು, ನಾನು ಮೇಲೆ ಹೇಳಿದ ಪರಂಪರೆಗೆ ಸೇರಿದವರು. ಈ ಮೂವರು ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಗೌರವ ಪ್ರಶಸ್ತಿಯನ್ನು ರಾಷ್ಟ್ರಪತಿಗಳಿಂದ ಪಡೆಯಲು ದೆಹಲಿಗೆ ಬಂದಿದ್ದರು. ಅವರೊಂದಿಗೆ ಇದೇ ಯುವ ಗೌರವ ಪ್ರಶಸ್ತಿಯನ್ನು ಪಡೆದ ಡಾ. ಮಂಜುನಾಥ ಪಾಳ್ಯರವರೂ ಬಂದಿದ್ದರು. ಇವರನ್ನು ದೆಹಲಿ ಕರ್ನಾಟಕ ಸಂಘಕ್ಕೆ ಬರಮಾಡಿಕೊಂಡು ಅಭಿನಂದಿಸುವ ನಮ್ಮ ಅಭಿಲಾಷೆ ಪೂರ್ಣಗೊಂಡಿದ್ದಲ್ಲದೆ, ಇದೊಂದು ಬಗೆಯಲ್ಲಿ ಕರ್ನಾಟಕದ ಸಾಹಿತ್ಯ ಸಂಘಟನೆಯಲ್ಲಿ ವಿಶಿಷ್ಟವಾದ ಚಾರಿತ್ರಿಕ ದಾಖಲೆಯಾಗಿದೆ ಎಂದರೆ ಅತಿರೇಕದ ಮಾತಲ್ಲ. ಈಗಿರುವ ಕನ್ನಡ ಭಾಷೆಯ ಮತ್ತು ಸಂಸ್ಕೃತಿಯ ಉನ್ನತ ಸಂಶೋಧಕರನ್ನು ಒಂದೇ ವೇದಿಕೆಯಲ್ಲಿ ಕಾಣುವ ಸುಯೋಗ ನಮ್ಮದಾಗಿತ್ತು. ಸುಮಾರು ಆರು ದಶಕಗಳಿಗೂ ಮೀರಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಕುರಿತಾಗಿ ಸಂಶೋಧನೆ ನಡೆಸಿದ್ದೆ ಅಲ್ಲದೆ, ನೂರಾರು ಸಮರ್ಥ ವಿದ್ಯಾರ್ಥಿಗಳನ್ನು, ಸಂಶೋಧಕರನ್ನು ಈ ದಿಶೆಯಲ್ಲಿ ತಯಾರು ಮಾಡಿದ್ದು ಇವರೆಲ್ಲರ ಹೆಗ್ಗಳಿಕೆ.

ಈ ಮೂವರು ಕಟ್ಟಿದ ಕರ್ನಾಟಕದ ಮತ್ತು ಕನ್ನಡದ ಸಂಶೋಧನಾ ಜಗತ್ತು ನಮ್ಮ ಭಾಷೆ ಮತ್ತು ಸಂಸ್ಕೃತಿಗಳನ್ನು ಅರಿತುಕೊಳ್ಳಲು ಹೊಸ ಆಯಾಮಗಳನ್ನು ನೀಡಿವೆ. ಕನ್ನಡದ ಶಾಸನಗಳಿಂದ, ಕನ್ನಡದ ಛಂದಸ್ಸು, ವ್ಯಾಕರಣ, ಕರ್ನಾಟಕದ (ಕನ್ನಡದ) ಮೇಲೆ ಬೇರೆ ಸಂಸ್ಕೃತಿಗಳಿಂದ, ಭಾಷೆಗಳಿಂದ ಆದ ಪರಿಣಾಮಗಳು, ಕರ್ನಾಟಕದ ಹಲವಾರು ಜನಸಮುದಾಯಗಳ ಉಗಮ ಅವುಗಳ ಪರಂಪರೆಗಳ ಕುರಿತಾಗಿ...ಹೀಗೆ ಅವರ ಸಂಶೊಧನಾ ವಿಷಯಗಳ ಮತ್ತು ಸಲಕರಣೆಗಳ ಆಕರಗಳ ಹರವು ಬಹು ದೊಡ್ಡದು. ಈ ಮೂವರು ನಮ್ಮ ಕರ್ನಾಟಕದ ಮೂರು ವಿಶ್ವವಿದ್ಯಾಲಯಗಳು ಇದ್ದಂತೆ. ವಿಶ್ವವಿದ್ಯಾಲಯಗಳು ಮಾಡುವಷ್ಟು ಕೆಲಸವನ್ನು ಅವರೆಲ್ಲ ಮಾಡಿದ್ದಾರೆ. ಅದನ್ನೆಲ್ಲ ಪಟ್ಟಿ ಮಾಡುತ್ತ ಹೋದರೆ ಅದೇ ದೊಡ್ಡ ಹೊತ್ತಿಗೆಯಾದಿತು.

ತಮ್ಮ ಚಿಕ್ಕ ಭಾಷಣದಲ್ಲಿ ಈ ಮೂವರೂ ಸಹ ತಮ್ಮ ಮೇಲೆ ಪ್ರಭಾವ ಬೀರಿದ ಹಿರಿಯ ವಿದ್ವಾಂಸರನ್ನು, ತಮ್ಮ ಗುರು ಪರಂಪರೆಯನ್ನು ನೆನೆಸಿಕೊಳ್ಳುತ್ತ, ಈ ಸಂಶೋಧನೆಯ ಕೆಲಸವನ್ನು ಇತರರು ಮುಂದುವರಿಸಿಕೊಂಡು ಹೋಗುವ ಬಗ್ಗೆ ಮಾತನಾಡಿದರು. ತಾವು ಕಂಡಿದ್ದೆಲ್ಲ, ಬರೆದಿದ್ದೆಲ್ಲ ಸಂಪೂರ್ಣ ಸತ್ಯವೆಂದು ಅವರು ಪ್ರತಿಪಾದಿಸಲಿಲ್ಲ. ತಮ್ಮ ಸಹವಿದ್ವಾಂಸರೊಂದಿಗೆ ಇರುವ ಮತಭೇದ, ಭಿನ್ನಾಭಿಪ್ರಾಯಗಳು (ಜಗಳಗಳು) ಮತ್ತು ಅನುಮಾನಗಳನ್ನು ಅವರು ಒಪ್ಪಿಕೊಂಡು, ಇವೆಲ್ಲವು ಹೇಗೆ ಸಂಶೋಧನೆಯೆಂಬುದನ್ನು ಅತ್ಯಂತ ರೋಚಕವಾದ ಮತ್ತು ರೋಮಾಂಚನವಾದ ಮಾಧ್ಯಮವನ್ನಾಗಿ ತಮ್ಮ ಬದುಕಿನ ಭಾಗವಾಗಿ ರೂಪಿಸಿದ್ದನ್ನು ನಮ್ಮೆಲ್ಲರೊಂದಿಗೆ ಹಂಚಿಕೊಂಡರು. ಎಲ್ಲಕ್ಕಿಂತ ಮುಖ್ಯವಾಗಿ ತಾವೆಲ್ಲರೂ ತೊಡಗಿಸಿಕೊಂಡ ಈ ಕೆಲಸದಲ್ಲಿ ಮುಂದಿನ ಪೀಳಿಗೆ ಬರುವಂತಾಗಬೇಕು, ಅವರಿಗೆಲ್ಲ ಇದರಲ್ಲಿ ಆಸಕ್ತಿ ಹುಟ್ಟುವಂತಾಗಬೇಕು ಎಂಬ ಹಂಬಲ ಅವರದ್ದು. 'ಮೊದಲು ತಿಳಿದುಕೊಳ್ಳಬೇಕು, ನಂತರದಲ್ಲಿ ಈ ಅರಿವಿನಿಂದ ಮುಂದುವರಿಯಬೇಕು' ಎಂಬ ಅವರ ಸಂಶೋಧನಾ ಮಂತ್ರ ಮೇಲು ನೋಟಕ್ಕೆ ಸರಳವಾಗಿ ಕಾಣಿಸಿದರೂ ಅದರ ಹಿಂದೆ ವ್ಯವಸ್ಥಿತವಾಗಿ ಆಗಬೇಕಾದ ಅಪ್ಪಟ ಕೆಲಸ ಎಲ್ಲರಿಗೂ ಒಲಿಯುವಂತದಲ್ಲ.

ಈ ಮೂವರನ್ನು ಒಟ್ಟಾಗಿ ಕಂಡಾಗ ಅನಿಸುವುದೆಂದರೆ ಅವರಲ್ಲಿ ಆರೇಳು ದಶಕಗಳಿಗೂ ಮೀರಿ ನಿರಂತರವಾಗಿ ಅವಿರ್ಭಸಿದ ಸಂಶೋಧನಾ ಕ್ರಮ ಅವರ ಜೀವನದ ಮತ್ತು ಬೌದ್ಧಿಕ ಪ್ರಪಂಚದ ಅವಿಭಾಜ್ಯ ಅಂಗವಾಗಿ ಹೋಗಿದೆ. ಮತ್ತೊಮ್ಮೆ ಅವತರಿಸಿದರೆ ತಮಗೆ ಇದೇ ತಮ್ಮ ಬದುಕಿನ ದಾರಿಯಾಗಲೆಂಬುದು ಅವರೆಲ್ಲರ ಆಶಯ. (ಈ ಮೂವರ ಮತ್ತು ದೆಹಲಿಯ ಇತರ ವಿದ್ವಾಂಸರ ಈ ಸಂಜೆಯ ಭಾಷಣಗಳು ದೆಹಲಿ ಕರ್ನಾಟಕ ಸಂಘದ ಹೆಸರಿನಲ್ಲಿ ಯು ಟ್ಯೂಬಿನಲ್ಲಿ ಉಪಲಬ್ಧ).

*ಡಾ. ವೆಂಕಟಾಚಲ ಹೆಗಡೆ*
ಅಧ್ಯಕ್ಷರು

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ,


ತಮಗೆಲ್ಲರಿಗೂ ಚಾಂದ್ರಮಾನ ಯುಗಾದಿ ಮತ್ತು ಹೊಸ ವರ್ಷದ ಶುಭಾಶಯಗಳು. ದೆಹಲಿಯಲ್ಲಿ ಚಳಿಗಾಲ ಮುಗಿದು ಬೇಸಿಗೆ ಆರಂಭವಾಗಿದೆ. ಮಕ್ಕಳಿಗೆ ಶಾಲೆ ಪುನರಾರಂಭವಾಗಿವೆ ಎಲ್ಲಾ ಮಕ್ಕಳಿಗೂ ಹೊಸವರ್ಷ ಶುಭವಾಗಲಿ. ಸಂಘದಲ್ಲಿ ಕಾರ್ಯಕ್ರಮಗಳು ಆರಂಭಗೊಂಡಿವೆ. ಪದ್ಮಶ್ರೀ ಸಾಲುಮರದ ತಿಮ್ಮಕ್ಕ ಅವರಿಗೆ ಅಭಿನಂದನಾ ಕಾರ್ಯಕ್ರಮ ನಡೆದಿದೆ. ದೆಹಲಿ ಕರ್ನಾಟಕ ಸಂಘದಿಂದ 2012ನೇ ಸಾಲಿನ ಡಾ. ಶಿವರಾಮ ಕಾರಂತ ಪ್ರಶಸ್ತಿಯನ್ನು ಪಡೆದ ಸಾಲುಮರದ ತಿಮ್ಮಕ್ಕನಿಗೆ ಪದ್ಮಶ್ರೀ ಪ್ರಶಸ್ತಿ ಲಭಿಸಿದ್ದರಿಂದ, ಶಿವರಾಮ ಕಾರಂತ ಪ್ರಶಸ್ತಿಗೆ ಇನ್ನೂ ಹೆಚ್ಚಿನ ಘನತೆ ಸಿಕ್ಕಿದಂತಾಗಿದೆ.

ಪುಲ್ವಾಮ ಗಡಿಯಲ್ಲಿ ವೀರಮರಣ ಹೊಂದಿದ ಯೋಧರಿಗೆ ದೆಹಲಿ ಕರ್ನಾಟಕ ಸಂಘ ಮತ್ತು ಗೌಡ ಸಾರಸ್ವತ ಸಮಾಜದ ಜೊತೆಗೂಡಿ 'ನೃತ್ಯ ನಮನ' ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಲು ಸಹಕರಿಸಿದ ಶ್ರೀಮತಿ ನಯನಾ ಭಟ್ ಮತ್ತು ಶ್ರೀ ನರೇಂದ್ರ ಭಟ್ ಅವರಿಗೆ ಧನ್ಯವಾದಗಳು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಸ್ಥಳೀಯ ಮಹಿಳೆಯರು ಹೆಚ್ಚು ಸಕ್ರಿಯರಾಗಿ ಭಾಗವಹಿಸಿದ್ದಾರೆ ಮತ್ತು ಸುಬ್ರಹ್ಮಣ್ಯೇಶ್ವರ ಮಹಾವಿದ್ಯಾಲಯದ ವಿದ್ಯಾರ್ಥಿಗಳ 'ನೃತ್ಯ ಸೌರಭ' ತಂಡದ ನಲ್ವತ್ತೆಂಟಕ್ಕೂ ಹೆಚ್ಚು ಕಲಾವಿದರು ಭಾರತದ ವಿವಿಧ ರಾಜ್ಯಗಳ ಕನ್ನಡ ಮತ್ತು ಕನ್ನಡೇತರ ಭಾಷೆಯ ಹಾಡುಗಳಿಗೆ ಮಾಡಿದ ನೃತ್ಯ ಕಾರ್ಯಕ್ರಮವು ವಿಶೇಷವಾಗಿ ಮೂಡಿ ಬಂದಿದೆ. ಇದಕ್ಕೆ ಸಹಕಾರ ನೀಡಿದ ಪ್ರೊ. ಬಾಲಕೃಷ್ಣ ಪೈ ಮತ್ತು ನೃತ್ಯ ಸಂಯೋಜಕರಾದ ಶ್ರೀ ಪ್ರಮೋದ್ ಕುಮಾರ್ ರೈ ಅವರಿಗೆ, ನೃತ್ಯ ಸೌರಭ ತಂಡಕ್ಕೆ ಅನಂತ ಧನ್ಯವಾದಗಳು. ಈ ಕಾರ್ಯಕ್ರಮಕ್ಕೆ ಆಗಮಿಸಿದ ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯರಾದ ಶ್ರೀಮತಿ ಶ್ಯಾಮಲಾ ಕುಂದರ್ ಮತ್ತು ಶ್ರೀಮತಿ ಪುನೀತ, ಐಏಎಸ್ ಅವರು ಸದಾ ದೆಹಲಿ ಕರ್ನಾಟಕ ಸಂಘದ ಜೊತೆಯಲ್ಲಿರುವ ಭರವಸೆಯನ್ನು ನೀಡಿದ್ದು ಸಂತೋಷದ ಸಂಗತಿ.

ದಿನಾಂಕ 14.04.2019ರಂದು ಬೆಳಗ್ಗೆ 10ಗಂಟೆಯಿಂದ 'ಆನಂದ ಕಂದರ ಸಾಹಿತ್ಯಕ ವ್ಯಕ್ತಿತ್ವ'–ವಿಚಾರ ಸಂಕಿರಣ ಮತ್ತು ಆನಂದ ಕಂದರ ಗೀತೆಗಳ ಗಾಯನವಿದೆ. 28.04.2019ರಂದು ಗುರ್‌ಗಾಂವ್ ಕನ್ನಡ ಸಂಘದ ಸಹಯೋಗದಲ್ಲಿ 'ಯುಗಾದಿ ಮಿಲನ' ಕಾರ್ಯಕ್ರಮಗಳು ನಡೆಯಲಿವೆ. ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*




## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**2019 ಏಪ್ರಿಲ್ 27**
ಶನಿವಾರ
ಸಂಜೆ : 5.00 ಗಂಟೆಗೆ

**ದೆಹಲಿ ಕರ್ನಾಟಕ ಸಂಘ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಫೌಂಡೇಶನ್, ನವದೆಹಲಿ ಸಹಯೋಗದೊಂದಿಗೆ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಣೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ**

**2019 ಏಪ್ರಿಲ್ 28**
ಭಾನುವಾರ
ಅಪರಾಹ್ನ : 3.00 ಗಂಟೆಗೆ

**ದೆಹಲಿ ಕರ್ನಾಟಕ ಸಂಘ ಹಾಗೂ ಗುರ್‌ಗ್ರಾಮ ಕನ್ನಡ ಸಂಘದ ಸಹಯೋಗದೊಂದಿಗೆ 'ಯುಗಾದಿ ಮಿಲನ' ಪ್ರಯುಕ್ತ ವಿವಿಧ ಕಾರ್ಯಕ್ರಮವಿದೆ**
**(ಸ್ಥಳ ಮತ್ತು ಇತರ ವಿವರಗಳನ್ನು ಆಹ್ವಾನ ಪತ್ರಿಕೆಯಲ್ಲಿ ತಿಳಿಸಲಾಗುವುದು)**

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್, MBBS, MS (AIIMS), ONCO-SURGERY (IRCH, AIIMS)** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 21 ಏಪ್ರಿಲ್, 2019ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ B.A.M.S., Msc, Yoga Therapy** ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 21 ಏಪ್ರಿಲ್, 2019ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ MS, FNB, Spine Surgeon,** ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 28 ಏಪ್ರಿಲ್, 2019ರಂದು ಬೆಳಿಗ್ಗೆ 11 ಗಂಟೆಯಿಂದ




# ಸಾಲುಮರದ ತಿಮ್ಮಕ್ಕ ಅವರಿಗೆ ಅಭಿನಂದನೆ

ಈ ಬಾರಿ ಪದ್ಮಶ್ರೀ ಪ್ರಶಸ್ತಿ ಪಡೆದ ಪರಿಸರವಾದಿ ಕರ್ನಾಟಕದ ಹೆಮ್ಮೆಯ ಶ್ರೀಮತಿ ಸಾಲುಮರದ ತಿಮ್ಮಕ್ಕ ಅವರಿಗೆ ದೆಹಲಿ ಕರ್ನಾಟಕ ಸಂಘ ಅಭಿನಂದಿಸಿದೆ. ದಿನಾಂಕ 17.03.2019 ರಂದು ನಡೆದ ಸಮಾರಂಭದಲ್ಲಿ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಶಾಲು ಹೊದಿಸಿ, ಸ್ಮರಣಿಕೆ ನೀಡಿ ಅಭಿನಂದಿಸಿದರು.

ಡಾ. ವೆಂಕಟಾಚಲ ಹೆಗಡೆಯವರು ಮಾತನಾಡಿ ತಿಮ್ಮಕ್ಕನವರ ಸಾಧನೆ ಸ್ಫೂರ್ತಿದಾಯಕ. ಪರಿಸರವನ್ನು ಉಳಿಸುವ ನಿಟ್ಟಿನಲ್ಲಿ ಅವರ ಕೆಲಸ ಆದರ್ಶಮಯ ಎಂದು ಅಭಿನಂದಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ತಿಮ್ಮಕ್ಕ ದೆಹಲಿ ಕರ್ನಾಟಕ ಸಂಘದಲ್ಲಿ ಹಿಂದೆಯೂ ಪ್ರಶಸ್ತಿ ಪಡೆದ ಖುಷಿಯ ಅನುಭವವಿದೆ. ನಿಮ್ಮ ಪ್ರೀತಿಗೆ ನನ್ನ ಕೃತಜ್ಞತೆಗಳು ಎಂದು ಹೇಳಿದರು. ಸಾಲುಮರದ ತಿಮ್ಮಕ್ಕ ಅವರು ದೆಹಲಿ ಕರ್ನಾಟಕ ಸಂಘದಿಂದ 2012ನೇ ಸಾಲಿನ ಡಾ. ಶಿವರಾಮ ಕಾರಂತ ಪ್ರಶಸ್ತಿ ಪಡೆದಿದ್ದರು.

ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ವತಿಯಿಂದ ತಿಮ್ಮಕ್ಕನವರನ್ನು ಇದೇ ಸಂದರ್ಭದಲ್ಲಿ ಅಭಿನಂದಿಸಲಾಯಿತು. ದೆಹಲಿಯ ಕೃಷಿಕ್ ಸರ್ವೋದಯ ಫೌಂಡೇಷನ್‌ನ ಪಿ.ಸಿ. ಶ್ರೀನಿವಾಸ ಮತ್ತು ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಪರವಾಗಿ ಮಮತಾ ಗಿರಿಯಪ್ಪ ಅವರು ತಿಮ್ಮಕ್ಕನವರನ್ನು ಅಭಿನಂದಿಸಿ ಮಾತನಾಡಿದರು.

ಆರಂಭದಲ್ಲಿ ಸಾಲುಮರದ ತಿಮ್ಮಕ್ಕ ಅವರು



ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಸಸಿಯನ್ನು ನೆಟ್ಟು ಶುಭ ಹಾರೈಸಿದರು.

ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಕಾರ್ಯಕ್ರಮ ನಿರೂಪಿಸಿದರು. ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ ಅವರು ವಂದಿಸಿದರು.



**ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಸದಸ್ಯೆಯರು ಸಾಲುಮರದ ತಿಮ್ಮಕ್ಕ ಅವರನ್ನು ಅಭಿನಂದಿಸುತ್ತಿರುವುದು**

# ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಸಾಲುಮರದ ತಿಮ್ಮಕ್ಕ ಭೇಟಿ



ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರಿಂದ ಪದ್ಮಶ್ರೀ ಪುರಸ್ಕಾರ ಪಡೆದ ಪರಿಸರಪ್ರೇಮಿ, ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಭೇಟಿ ನೀಡಿ ಗಿಡ ನೆಟ್ಟು ನೆರೆದ ಎಲ್ಲಾ ಪರಿಸರ ಪ್ರೇಮಿಗಳನ್ನು ಹರಸಿದರು. ಗಿಡಮರಗಳಿಂದ ಕೂಡಿ ಹಸಿರಾದ ಸಂಸ್ಥೆಯ ಆವರಣವನ್ನು ಕಂಡು ಸಂತಸಪಟ್ಟು ಮಾತನಾಡಿದ ಅವರು ಗಿಡಮರಗಳು ಮನುಷ್ಯನಿಗಷ್ಟೇ ಅಲ್ಲ ಪ್ರತಿಯೊಂದು ಜೀವಿಗೂ ಬದುಕಲು ಬೇಕು. ಹೆಚ್ಚೆಚ್ಚು ಗಿಡಗಳನ್ನು ಬೆಳೆಸುತ್ತಾ ಪರಿಸರವನ್ನು ಪ್ರೀತಿಸಬೇಕು. ಆ ಮೂಲಕ ಈ ದೇಶಕ್ಕೆ ತಣ್ಣನೆ ಗಾಳಿ ಸದಾ ಬೀಸುತ್ತಿರಬೇಕು ಎಂದು ಆಶಿಸಿದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ವತಿಯಿಂದ ಸಾಲು ಮರದ ತಿಮ್ಮಕ್ಕ ಅವರಿಗೆ ಸಂಸ್ಥೆಯ ಗೌರವ ಕಾರ್ಯದರ್ಶಿ ಸೋಮನಾಥ ಎಸ್. ಬಿರಾದರ ಅವರು ಶಾಲು ಹೊದಿಸಿ ಹಾಗೂ ಶಾಲಾ ವ್ಯವಸ್ಥಾಪಕಾರದ ಶಿವಾನಂದ ಸಿರ್ಸಿಕರ್ ಅವರು ಸ್ಮರಣಿಕೆ ನೀಡಿ ಗೌರವಿಸಿದರು.

ಈ ಸಂದರ್ಭದಲ್ಲಿ ಬೇಲೂರಿನ ಪುಷ್ಪಗಿರಿ ಸೋಮಶೇಖರ ಸ್ವಾಮಿಜಿ, ಬೇಲೂರಿನ ಶಾಸಕರಾದ ಲಿಂಗೇಶ ಕೆ.ಎಸ್., ಕರ್ನಾಟಕ ಸರಕಾರದ ಕರ್ನಾಟಕ ಉದ್ಯೋಗ ಮಿತ್ರದ ನಿವಾಸಿ ನಿರ್ದೇಶಕರಾದ ಪಿ. ಜಯರಾಜ್, ಹಾಗೂ ಗಣ್ಯರು, ಸಂಸ್ಥೆಯ ಪ್ರಭಾರ ಪ್ರಾಂಶುಪಾಲರು, ಶಿಕ್ಷಕ ವೃಂದದವರು ಉಪಸ್ಥಿತರಿದ್ದರು. ಶಿಕ್ಷಕ ಅರವಿಂದ ಬಿಜ್ಜೈ ಸ್ವಾಗತಿಸಿದರು. ಎಚ್.ಎಸ್. ತೇಲಿ ವಂದಿಸಿದರು.

*ಅರವಿಂದ ಬಿಜ್ಜೈ*



## ತಿಮ್ಮಕ್ಕ ಅವರಿಗೆ ಕಾವ್ಯ ನಮನ



# ನಿಸ್ವಾರ್ಥ

ನಿಸ್ವಾರ್ಥ ಸೇವೆಗೆ ಎಂದಿಗೂ ನಿರಾಸೆಯಿಲ್ಲ
ನಿಸ್ವಾರ್ಥ ಸೇವೆಗೆ ದೇವನ ಆಶೀರ್ವಾದ
ಕೊನೆಯಿಲ್ಲ
ನಿಸ್ವಾರ್ಥ ಸೇವೆಗೆ ಜನರ ಪ್ರೀತಿಗೆ ಅಂತ್ಯವಿಲ್ಲ

ನಿಸ್ವಾರ್ಥ ಸೇವೆಗೆ ಪ್ರಶಸ್ತಿಗಳ ಕೊರತೆಯಿಲ್ಲ
ನಿಸ್ವಾರ್ಥ ಸೇವೆ ಮಾಡಿದ ಸಾಲುಮರದ
ತಿಮ್ಮಕ್ಕನಿಗೆ ಪದ್ಮಶ್ರೀ, ರಾಜ್ಯ ಪ್ರಶಸ್ತಿ
ಅರಸಿ ಬಂದವು ಹಲವು ಪ್ರಶಸ್ತಿಗಳು

ಮಕ್ಕಳಿಲ್ಲದ ನೋವಿಗೆ ಮರಗಳ ನೆಟ್ಟು
ಮಕ್ಕಳಂತೆ ಆಡಿಸಿ, ಬೆಳೆಸಿ, ನೀರುಣಿಸಿ
ಮಕ್ಕಳ ಪ್ರೀತಿ ಕಂಡ ನಿಸ್ವಾರ್ಥ ಸೇವೆಗೆ
ನೀಡಿದ ಭಗವಂತ
ಸಾವಿರಾರು ಮಕ್ಕಳಿಗೆ ನೆರಳು
ಕೊಡುವ ಭಾಗ್ಯ

ನಿಸ್ವಾರ್ಥ ಸೇವಿ
ಸಾಲುಮರದ ತಿಮ್ಮಕ್ಕನಿಗೆ
ಸಾವಿರ ನಮನ

*ಶ್ರೀನಾಥ್ ಎನ್.ಆರ್.*



# ಹೊರನಾಡ ಕನ್ನಡಿಗರ ಹೆಮ್ಮೆ ಡಾ. ಪುರುಷೋತ್ತಮ ಬಿಳಿಮಲೆ

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸಾಹಿತ್ಯ ಕ್ಷೇತ್ರದ ಸೇವೆಗಾಗಿ ನೀಡುವ ೨೦೧೮ರ ಸಾಹಿತ್ಯ ಶ್ರೀ ಪುರಸ್ಕಾರವನ್ನು ಪಡೆದ ಸಾಹಿತಿಗಳಲ್ಲಿ ಹೊರನಾಡ ಕನ್ನಡಿಗರಾದ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ವಿಶೇಷ ಮೆರುಗನ್ನು ನೀಡುತ್ತಾ ಬರುತ್ತಿರುವ ಡಾ. ಪುರುಷೋತ್ತಮ ಬಿಳಿಮಲೆ ಅವರು ಒಬ್ಬರಾಗಿದ್ದಾರೆ.

ಕನ್ನಡ ನಾಡು ನುಡಿಯ ಚರಿತ್ರೆಯನ್ನು ಓದುವ ಎಲ್ಲರಿಗೂ ತಾಯ್ನಾಡಿನಲ್ಲಿದ್ದುಕೊಂಡು ಕನ್ನಡದ ಬರವಣಿಗೆ, ಕಲೆ ಸಂಸ್ಕೃತಿಗಳನ್ನು ಕುರಿತಂತೆ ಅನೇಕ ಮಹನೀಯರು ಅವಿರತವಾಗಿ ದುಡಿಯುತ್ತಾ ಬಂದಿರುವುದು ತಿಳಿದೇ ಇದೆ. ಅಂತೆಯೇ ತಾಯ್ನಾಡಿನ ಹೊರಗಿದ್ದುಕೊಂಡು ಕನ್ನಡ ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಗಳಿಗೆ ಕೊಡುಗೆ ನೀಡಿದವರ ಸಂಖ್ಯೆ ತೀರ ಹೆಚ್ಚಿನದೇನೂ ಅಲ್ಲ ಎನ್ನುವುದು ಒಪ್ಪಲೇ ಬೇಕಾದ ಸತ್ಯ. ಅದಕ್ಕೆ ನಾವು ಪಟ್ಟಿ ಮಾಡಬಹುದಾದ ಹಲವು ಕಾರಣಗಳಲ್ಲಿ ಹೊರನಾಡಿನಲ್ಲಿ ಬಂದು ನೆಲೆ ನಿಂತ ಇತರ ದಕ್ಷಿಣ ರಾಜ್ಯಗಳ ಭಾಷಿಕರ ಸಂಖ್ಯೆಗೆ ಹೋಲಿಸಿದರೆ ಕನ್ನಡಿಗರು ಅಷ್ಟು ಪ್ರಮಾಣದಲ್ಲಿ ಬಂದಿಲ್ಲ ಎನ್ನುವುದೂ ಒಂದು. ಅದೇನೇ ಇರಲಿ ತಮ್ಮ ಬದುಕನ್ನು ರೂಪಿಸಿಕೊಳ್ಳಲು ತಾಯ್ನಾಡಿನಿಂದ ಸಾವಿರಾರು ಕಿಲೋಮೀಟರ್ ದೂರದಲ್ಲಿ ನೆಲೆ ನಿಂತು ಅಲ್ಲಿನ ಹೊಸ ಪರಿಸರ, ಆಹಾರ ಪದ್ಧತಿ, ಭಿನ್ನ ಆಚರಣೆ, ಭಾಷೆ ಗಳ ಜನರ ನಡುವೆ ಬದುಕುತ್ತ, ವಯುಕ್ತಿಕ, ಕೌಟುಂಬಿಕ, ಸಾಮಾಜಿಕ ಹಾಗೂ ವೃತ್ತಿ ಜೀವನದ ಎಲ್ಲ ಏಳು ಬೀಳುಗಳನ್ನು ಈಜಿ ದಡ ಸೇರುವುದೇ ಒಂದು ಸವಾಲಿನ ಕೆಲಸವೇ ಸರಿ. ಅದರಲ್ಲೂ ಉತ್ತರಭಾರತದಲ್ಲಿ ನೆಲೆಸಿರುವ ನಮ್ಮಂತಹವರು ವರ್ಷದ ಬಹುಕಾಲ ಒಂದೋ ಸುಡುವ ಕಡು ಬೇಸಿಗೆ ಝಳ, ಇಲ್ಲವೇ ಮೈ ಕೊರೆಯುವ ಚಳಿಗಾಲದಂತಹ ವಿಪರೀತಗಳಿಗೆ ಸೆಡ್ಡು ಹೊಡೆದು ವೃತ್ತಿ ಬದುಕಿನ ಭಾಗವಾದ ಕಚೇರಿ, ವ್ಯಾಪಾರ, ವ್ಯವಹಾರ, ವಿದ್ಯಾಭ್ಯಾಸ ಇತ್ಯಾದಿಗಳನ್ನು ನಿರ್ವಹಿಸಿಕೊಂಡು ಬರುವುದರಲ್ಲೇ ಪ್ರತಿ ದಿನ ನಮ್ಮ ಎಲ್ಲ ಸಮಯ, ಶ್ರಮ, ಶಕ್ತಿಗಳು ಬಹುತೇಕ ಮುಗಿದೇ ಹೋಗಿರುತ್ತವೆ. ಇಷ್ಟಾದರೂ ನಮ್ಮಂತೆಯೇ ತಮ್ಮ ಬದುಕಿನ ಎಲ್ಲ ಜವಾಬುದಾರಿಗಳನ್ನು ನಿರ್ವಹಿಸುತ್ತಲೇ ಅದರೊಳಗೊಂದಿಷ್ಟು ಸಮಯವನ್ನು ಸಾಹಿತ್ಯ ಸಂಸ್ಕೃತಿ ಚಿಂತನೆಗಳಿಗಾಗಿ ಮೀಸಲಿಟ್ಟು ತಮ್ಮ ಸೃಜನಶೀಲತೆಯನ್ನು ರಚನಾತ್ಮಕವಾಗಿ ಬಳಸಿಕೊಂಡು ಹೊರನಾಡ ಕನ್ನಡಿಗರಾಗಿ ಕನ್ನಡ ನಾಡು ನುಡಿಗಳಿಗೆ ನಿರಂತರವಾಗಿ ಸೇವೆ ಸಲ್ಲಿಸಿಕೊಂಡು ಬರುತ್ತಿರುವ ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸಾಹಿತ್ಯ



ಕ್ಷೇತ್ರದ ಸೇವೆಗಾಗಿ ನೀಡುವ ೨೦೧೮ರ ಸಾಹಿತ್ಯ ಶ್ರೀ ಪುರಸ್ಕಾರವನ್ನು ನೀಡಿರುವುದು ಅತ್ಯಂತ ಸಂತಸ ತಂದಿದೆ.

ಹೊರನಾಡಿನಲ್ಲಿದ್ದುಕೊಂಡು ಕನ್ನಡ ಭಾಷೆ ಮತ್ತು ಸಾಹಿತ್ಯಗಳಿಗೆ ಡಾ. ಬಿಳಿಮಲೆಯವರು ಸಲ್ಲಿಸುತ್ತಿರುವ ಸೇವೆ ಗಮನಾರ್ಹವಾದುದು. ಪ್ರಸ್ತುತ ಜವಹರಲಾಲ್ ವಿ. ವಿ. ಕನ್ನಡ ಪೀಠದ ಮುಖ್ಯಸ್ಥರಾಗಿರುವ ಡಾ. ಬಿಳಿಮಲೆಯವರು ಅವರ ನೇತೃತ್ವದಲ್ಲಿ ಕನ್ನಡದ ಪ್ರಾಚೀನ ಅಲಂಕಾರಿಕ ಕೃತಿ ಕವಿರಾಜ ಮಾರ್ಗ ಹಾಗೂ ಹತ್ತನೇ ಶತಮಾನದ ಮಹಾಕವಿ ರನ್ನ ವಿರಚಿತ-ಗದಾಯುದ್ಧ ಕೃತಿಯನ್ನು ಇಂಗ್ಲೀಷಿಗೆ ಅನುವಾದ ಮಾಡಿಸಿ ಪ್ರಕಟಪಡಿಸುವ ಮಹತ್ವದ ಕೆಲಸವನ್ನು ಮಾಡಿರುವುದು ಮತ್ತು ಕೆಲವೇ ತಿಂಗಳಲ್ಲಿ ಕನ್ನಡದ ಮೊದಲ ಗದ್ಯ ಕೃತಿ ವಡ್ಡಾರಾಧನೆ ಯನ್ನೂ ಇಂಗ್ಲಿಷಿಗೆ ತರುವ ಕೆಲಸ ಕೈಗೆತ್ತಿಕೊಂಡಿರುವುದು ಕನ್ನಡ ಭಾಷೆ ಮತ್ತು ಸಾಹಿತ್ಯ ಗಳು ರಾಷ್ಟ್ರೀಯ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಅಧಿಕೃತವಾಗಿ ಚರ್ಚೆಗೊಳಪಡುವಂತಹ ಅವಕಾಶಗಳನ್ನು ಒದಗಿಸಿಕೊಡುವಲ್ಲಿ ಮಹತ್ವದ ಹಾಗೂ ಸಶಕ್ತವಾದ ಪಾತ್ರವಹಿಸುತ್ತವೆನ್ನುವುದರಲ್ಲಿ ಎರಡು ಮಾತಿಲ್ಲ. ಇಂತಹ ದೂರ ದೃಷ್ಟಿಯುಳ್ಳ ಯೋಜನೆಗಳನ್ನು ಕರ್ನಾಟಕ ಸರ್ಕಾರ ಮತ್ತು ವಿಶ್ವ ವಿದ್ಯಾಲಯಗಳು ಇಷ್ಟೊತ್ತಿಗಾಗಲೇ ಮಾಡಬೇಕಿತ್ತು. ಆದರೆ ತಡವಾಗಿಯಾದರೂ ನಮ್ಮ ಪ್ರಾಚೀನ ಕನ್ನಡ ಸಾಹಿತ್ಯದ ಪರಿಚಯವನ್ನು ಅಂತರಾಷ್ಟ್ರೀಯ ಸ್ತರದ ಭಾಷೆಯಲ್ಲಿ ಪ್ರಕಟಿಸುವ ದಿಟ್ಟ ನಿಲುವುದು ತೆಗೆದುಕೊಂಡ ಜೆ ಎನ್ ಯು ಕನ್ನಡ ಪೀಠದ ಕೆಲಸ ಸುತ್ಯಾರ್ಹ. ಇಂತಹ ಆಲೋಚನೆ ಬರಲು ಡಾ. ಬಿಳಿಮಲೆಯವರು ಬಹುಕಾಲ ಹೊರನಾಡಿನಲ್ಲಿದ್ದುಕೊಂಡು ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಶ್ರೀಮಂತಿಕೆಯಿದ್ದರೂ ರಾಷ್ಟ್ರ ರಾಜಧಾನಿಯಲ್ಲಿ ಅದರ ಪ್ರತಿನಿಧೀಕರಣ ತೃಪ್ತಿಕರವಾಗಿಲ್ಲ ಎಂಬ ವಾಸ್ತವ ಸಂಗತಿಯನ್ನು ಗ್ರಹಿಸಿ, ಒಬ್ಬ ಚಿಂತಕರಾಗಿ, ಬರಹಗಾರರಾಗಿ ತಮಗೆ ಸಿಕ್ಕ ಎಲ್ಲ ಸಂದರ್ಭಗಳಲ್ಲೂ ಇಡೀ ಕನ್ನಡ ಸಮುದಾಯಕ್ಕೆ ಈ ವಿಚಾರಗಳನ್ನು ಪ್ರತಿಪಾದಿಸುತ್ತಲೇ ಬಂದಿದ್ದಾರೆ. ಅಲ್ಲದೆ ಜೆ.ಎನ್.ಯು. ಕನ್ನಡ ಪೀಠದ ಮುಖ್ಯಸ್ಥರಾಗಿ ತಮಗೆ ದೊರೆತ ಅಮೂಲ್ಯವಾದ ಅವಕಾಶವನ್ನು ಸದ್ಬಳಕೆ ಮಾಡಿಕೊಂಡ ಬಿಳಿಮಲೆ ಅವರು ಹೊರನಾಡಿನಲ್ಲಿ ಕನ್ನಡವನ್ನು ಕಟ್ಟಲು ಅವಿರತವಾಗಿ ಶ್ರಮಿಸುತ್ತ ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡುತ್ತಿದ್ದು ಇಂತಹ ಸಂದರ್ಭದಲ್ಲಿ ಅವರಿಗೆ ಸಾಹಿತ್ಯ ಶ್ರೀ ಪುರಸ್ಕಾರ ದೊರೆತಿರುವುದು ನಿಜಕ್ಕೂ ಹೊರನಾಡಿನಲ್ಲಿರುವ ಎಲ್ಲ ಕನ್ನಡಿಗರೂ ಹೆಮ್ಮೆ ಪಡಬೇಕಾದ ಸಂಗತಿ.

*ಚಂದ್ರಶೇಖರ್ ಎನ್ ಪಿ.*

## ಸಾರ್ವಜನಿಕ ಸಂಪರ್ಕ ಮಹಾಮಂಡಳಿಯ ಪ್ರಾಂತೀಯ ಅಧ್ಯಕ್ಷರಾಗಿ ಜಯಪ್ರಕಾಶ್ ರಾವ್



ಮೈಸೂರಿನ ಅಂತರರಾಷ್ಟ್ರೀಯ ವ್ಯಕ್ತಿ ವಿಕಸನ ತರಬೇತುದಾರ, ಕನ್ನಡ ಲೇಖಕ ಜಯಪ್ರಕಾಶ್ ರಾವ್ ಅವರು ಇತ್ತೀಚಿಗೆ ಜೈಪುರದಲ್ಲಿ ಜರಗಿದ ಸಾರ್ವಜನಿಕ ಸಂಪರ್ಕ ಮಹಾ ಮಂಡಳಿಯ ವಾರ್ಷಿಕ ಅಧಿವೇಶನದಲ್ಲಿ ದಕ್ಷಿಣ ಭಾರತ ರಾಜ್ಯಗಳ ಪ್ರಾಂತೀಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಇದೇ ವೇಳೆಗೆ ಅವರ ಕಾರ್ಯ ಸಾಧನೆಗಾಗಿ ಪುರಸ್ಕರಿಸಲಾಯಿತು. ಹಲವಾರು ರಾಷ್ಟ್ರ ಹಾಗೂ ರಾಜ್ಯಮಟ್ಟದ ಪ್ರಶಸ್ತಿಗಳನ್ನು ಪಡೆದಿರುವ ಶ್ರೀ ರಾವ್ ರಕ್ಷಣಾ ಸಂಶೋಧನಾ ವಿಭಾಗದ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಮೂರು ದಶಕಗಳ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

ವಿವಿಧ ಸಾಮಾಜಿಕ ಸೇವೆಗಳಲ್ಲಿ ತೊಡಗಿಸಿಕೊಂಡಿರುವ ಜಯಪ್ರಕಾಶ್ ರಾವ್ ಅವರು ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರು. ಇದೀಗ ಬಾಂಗ್ಲಾದೇಶದಲ್ಲಿ ಸಂಸ್ಥೆಯ ಶಾಖೆಯನ್ನು ಆರಂಭಿಸಲು ಢಾಕಾ ನಗರವನ್ನು ಅವರು ಸಂದರ್ಶಿಸಲಿದ್ದಾರೆ. ಶ್ರೀ ರಾವ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು



# ಹುತಾತ್ಮ ಯೋಧರಿಗೆ ಗಾನ ನೃತ್ಯಾಂಜಲಿ

ಕಾಶ್ಮೀರದ ಪುಲ್ವಾಮದಲ್ಲಿ ಉಗ್ರಗಾಮಿಗಳ ದಾಳಿಗೆ ಬಲಿಯಾದ ಹುತಾತ್ಮ ಯೋಧರಿಗೆ ಸ್ಥಳೀಯ ದೆಹಲಿಯ ಕಲಾವಿದರಿಂದ ವಿಶಿಷ್ಟ ರೀತಿಯಲ್ಲಿ ನಮನ ಸಲ್ಲಿಸಲಾಯಿತು. ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿಯ ಗೌಡ ಸಾರಸ್ವತ ಸಮಾಜದ ಸಂಯುಕ್ತಾಶ್ರಯದಲ್ಲಿ ದಿನಾಂಕ 30.03.2019ರಂದು 'ನೃತ್ಯಾಂಜಲಿ' ಗಾಯನ ಮತ್ತು ನೃತ್ಯಗಳ ಮೂಲಕ ವೀರಯೋಧರಿಗೆ ಗೌರವ ಸಲ್ಲಿಸಲಾಯಿತು.

ಅರ್ಜುನ ಪ್ರಶಸ್ತಿ ಪುರಸ್ಕೃತ ಶ್ರೀಮತಿ ದಮಯಂತಿ ವಿ. ತಾಂಬೆ ಮತ್ತು ಸಿ.ಆರ್.ಪಿ.ಎಫ್.ನ ನಿವೃತ್ತ ಹಿರಿಯ ಕಮಾಂಡೆಂಟ್ ಶ್ರೀ ಬಿ.ಎಸ್. ಕಲ್ಲೂರು ಅವರು ವಿಶೇಷವಾಗಿ ಉಪಸ್ಥಿತರಿದ್ದು ಮಾತನಾಡಿದರು. ದೇಶದ ರಕ್ಷಣೆಗಾಗಿ ಹಗಲಿರುಳು ದುಡಿಯುವ ಸೈನಿಕರ ಬದುಕು ತ್ಯಾಗಶೀಲವಾದದ್ದು ಮತ್ತು ಅವರ ಸೇವೆ ನಿಸ್ವಾರ್ಥವಾಗಿದೆ ಎಂದು ಅವರು ಸ್ಮರಿಸಿದರು.

ಭರವಸೆಯ ಭರತನಾಟ್ಯ ಕಲಾವಿದೆ ಕನಿಕಾಭಟ್ ಅವರ ಹೆತ್ತವರಾದ ಶ್ರೀಮತಿ ನಯನಾ ಭಟ್ ಮತ್ತು ಶ್ರೀ ನರೇಂದ್ರ ಭಟ್ ಅವರು ವಿಶೇಷವಾಗಿ ಈ ಕಾರ್ಯಕ್ರಮವನ್ನು ಸಂಯೋಜಿಸಿದ್ದರು. ಈ ದಂಪತಿಗಳನ್ನು ದೆಹಲಿ ಕರ್ನಾಟಕ ಸಂಘ ಗೌರವಿಸಿತು. ಸೈನಿಕರ ಕಲ್ಯಾಣ ನಿಧಿಗಾಗಿ ಈ ಕಾರ್ಯಕ್ರಮದ ಮೂಲಕ ಇವರು ಸುಮಾರು ಮೂರು ಲಕ್ಷ ಹಣವನ್ನು ಸಂಗ್ರಹಿಸಿ ಸಿ.ಆರ್.ಪಿ.ಎಫ್‌ಗೆ ನೀಡಿದರು. ಸಿ.ಆರ್.ಪಿ.ಎಫ್‌ನ ಕಮಾಂಡೆಂಟ್ ಶ್ರೀ ಹರ್ಷವರ್ಧನ ಮತ್ತು ಅಧಿಕಾರಿಗಳು, ಮಾಜಿ ಸೈನಿಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಈ ವಿಶಿಷ್ಟ ಬಗೆಯ ಕಾರ್ಯಕ್ರಮವನ್ನು ಸಂಘಟಿಸಲು ಸಹಕರಿಸಿದ ಗೌಡ ಸಾರಸ್ವತ ಸಮಾಜ ಮತ್ತು ನರೇಂದ್ರ ಭಟ್ ದಂಪತಿಗಳಿಗೆ ಕೃತಜ್ಞತೆ ಸಲ್ಲಿಸಿದರು. ದೇಶ ಸುರಕ್ಷಿತವಾಗಿ ನೆಮ್ಮದಿಯಿಂದ ಇರಲು ಸೈನಿಕರ ತ್ಯಾಗ, ಬಲಿದಾನದ ಹಿನ್ನಲೆ ಇದೆ. ಕಲಾವಿದರ ಈ ಬಗೆಯ ಸ್ಪಂದನೆ ಅಭಿನಂದನೀಯ ಎಂದು ಡಾ. ಹೆಗಡೆ ಹೇಳಿದರು.

ಗೌಡ ಸಾರಸ್ವತ ಸಮಾಜದ ಅಧ್ಯಕ್ಷ ಡಾ. ಎನ್.ವಿ. ಕಾಮತ್ ಮತ್ತು ಕಾರ್ಯದರ್ಶಿ ಯು. ನರೇಂದ್ರ ಭಟ್ ಉಪಸ್ಥಿತರಿದ್ದು ಮಾತನಾಡಿದರು.

ನೃತ್ಯ ಕಲಾವಿದರಾದ ಅಂಜಲಿಬಾಬು, ಅರುಣಿಮಾ ರಾವತ್, ಕನಿಕಾ ಭಟ್, ಲಾವಣ್ಯ ಜೂಲಿಯನ್ ಮತ್ತು ಸಪ್ನಾ ಅತ್ತಾವರ ಅವರು 'ವಂದೇ ಮಾತರಂ' ಸೇರಿದಂತೆ ದೇಶಭಕ್ತಿಯ ಹಾಡುಗಳಿಗೆ ನೃತ್ಯ ಪ್ರದರ್ಶನ ನೀಡಿದರು.

ಭಾಗಶಃ ಅಂಧ ಕಲಾವಿದೆ, ಖ್ಯಾತ ಗಾಯಕಿ ವಸುಂಧರಾ ರಾತೂರಿ ಅವರು ಮನೋಜ್ಞವಾಗಿ ಹಾಡಿದರು. ಬಾಲ ಕಲಾವಿದರಾದ ಅನನ್ಯಾ ಶರ್ಮ ಮತ್ತು ರಾಧೇ ಶರ್ಮಾ ಅವರ ಸಿತಾರ್ ಮತ್ತು ತಬಲಾ ವಾದನ ಗಮನ ಸೆಳೆಯಿತು.

ಹಿರಿಯ ಚಿತ್ರ ಕಲಾವಿದ ಸುಧೀರ್ ಫಡ್ನೀಸ್ ಮತ್ತು ಕುಮಾರಿ ನಮಿತಾ ಭಟ್ ಅವರ ಚಿತ್ರ ಪ್ರದರ್ಶನ ಮತ್ತು ಮಾರಾಟ ಜರಗಿಸಲಾಗಿತ್ತು.

ನಮಿತಾ ಭಟ್ ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು.

*ಡಾ. ಅವನೀಂದ್ರನಾಥ್ ರಾವ್*
*ಚಿತ್ರಕೃಪೆ : ದಿನೇಶ್ ಶೆಣೈ*



**ನೃತ್ಯಾಂಜಲಿ ಕಾರ್ಯಕ್ರಮದ ರೂವಾರಿ ಶ್ರೀಮತಿ ನಯನಾ ಭಟ್ ಮತ್ತು ಕಲಾವಿದ ಸುಧೀರ್ ಫಡ್ನೀಸ್**



**ಖ್ಯಾತ ಗಾಯಕಿ ವಸುಂಧರಾ ರಾತೂರಿ**

# 'ನೃತ್ಯಾಂಜಲಿ' ಸಾಂಸ್ಕೃತಿಕ ಕಾರ್ಯಕ್ರಮದ ಚಿತ್ರಗಳು










ಶ್ರೀಮತಿ ದಮಯಂತಿ ವಿ. ತಾಂಬೆ ಅವರು ಹುತಾತ್ಮ ಯೋಧರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುತ್ತಿರುವುದು



# ಎಲ್ಲ ಸೃಷ್ಟಿಗೂ ಹೆಣ್ಣು ಅಧಿದೇವತೆ

**- ಶ್ಯಾಮಲಾ ಎಸ್. ಕುಂದರ್**

ವಿದ್ಯೆಗೆ ಸರಸ್ವತಿ, ಸಂಪತ್ತಿಗೆ ಲಕ್ಷ್ಮಿ ಮತ್ತು ಶಕ್ತಿಗೆ ದೇವಿಯನ್ನು ಆರಾಧಿಸುತ್ತೇವೆ. ಎಲ್ಲ ಸೃಷ್ಟಿಗೂ ಹೆಣ್ಣು ಅಧಿದೇವತೆ ಎಂದು ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ಶ್ರೀಮತಿ ಶ್ಯಾಮಲಾ ಎಸ್. ಕುಂದರ್ ಅಭಿಪ್ರಾಯಪಟ್ಟರು. ದಿನಾಂಕ 31.03.2019ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ನೆಲದಲ್ಲಿ ಹರಿಯುವ ಎಲ್ಲ ನದಿಗಳನ್ನು ನಾವು ಹೆಣ್ಣಿನ ಹೆಸರಿನಿಂದ ಕರೆಯುತ್ತೇವೆ. ಭಾರತೀಯರು ಹೆಣ್ಣಿಗೆ ನೀಡಿದ ಗೌರವ ಶ್ರೇಷ್ಟ ಬಗೆಯದು ಎಂಬುದನ್ನು ನಾವು ಮರೆಯಬಾರದು ಎಂದವರು ತಿಳಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಐ.ಐ.ಎಸ್. ಅಧಿಕಾರಿ ಶ್ರೀಮತಿ ಪುನೀತ ಅವರು ಮಹಿಳಾ ದಿನಾಚರಣೆಯ ಸಡಗರದೊಂದಿಗೆ ಮಹಿಳೆಯರು ಆತ್ಮಾವಲೋಕ ಮಾಡಿಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ಕುಟುಂಬದ ಪೋಷಣೆಯಲ್ಲಿ ಸ್ತ್ರೀಯ ಪಾತ್ರ ಮಹತ್ವದ್ದು ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ವಿವರಿಸಿದರು.

ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆಯಾಗಿ ನೂತನವಾಗಿ ನೇಮಕವಾಗಿರುವ ಶ್ರೀಮತಿ ಶ್ಯಾಮಲಾ ಎಸ್. ಕುಂದರ್ ಮತ್ತು ಐ.ಐ.ಎಸ್. ಅಧಿಕಾರಿ ಶ್ರೀಮತಿ ಪುನೀತ ಅವರನ್ನು ಅಭಿನಂದಿಸಲಾಯಿತು.

ದೆಹಲಿ ಕರ್ನಾಟಕ ಸಂಘದ 2019-21ನೇ ಸಾಲಿಗೆ ನಡೆದ ಚುನಾವಣೆಯ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ಸಂಘದ ಆಜೀವ ಸದಸ್ಯ ಮತ್ತು ಕಾರ್ಪೋರೇಶನ್ ಬ್ಯಾಂಕಿನ ಡಿ.ಜಿ.ಎಂ. ಆಗಿ ನಿವೃತ್ತರಾದ ಶ್ರೀ ಶಿವಾನಂದ ಹೆಬ್ಬಾರ್ ಮತ್ತು ಅವರ ಶ್ರೀಮತಿಯವರನ್ನು ಆತ್ಮೀಯವಾಗಿ ಬೀಳ್ಕೊಡಲಾಯಿತು.

ಶ್ರೀಮತಿ ಸವಿತಾ ಇನಾಂದಾರ್ ನಿರ್ದೇಶನದಲ್ಲಿ ಕಿರು ನಾಟಕ 'ಹಳೇ ಮನೆ ಹೊಸ ಕಳೆ' ಪ್ರದರ್ಶನಗೊಂಡಿತು. ಜನಕಪುರಿ ಮಹಿಳಾ ಮಂಡಳಿ, ಡೆಲ್ಲಿ ಫ್ರೆಂಡ್ಸ್ ತಂಡದ ಕಲಾವಿದರು ನೃತ್ಯ ಪ್ರದರ್ಶಿಸಿದರು. ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್, ದೆಹಲಿ ಕನ್ನಡ ಶಾಲೆ ಮತ್ತು ಕರ್ನಾಟಕ ಭವನದ ಸದಸ್ಯೆಯರಿಂದ ಗಾಯನ ನಡೆಯಿತು. ಹಿರಿಯ ಕನ್ನಡತಿ ಡಾ. ಅಹಲ್ಯಾ ಚಿಂತಾಮಣಿ ಅವರು ಸ್ವರಚಿತ ಕವನಗಳನ್ನು ಓದಿದರು.

ಸುಬ್ರಹ್ಮಣ್ಯೇಶ್ವರ ಮಹಾವಿದ್ಯಾಲಯದ ವಿದ್ಯಾರ್ಥಿಗಳ 'ಸಂಸ್ಕೃತಿ ಸೌರಭ' ತಂಡ ಪ್ರಸ್ತುತಪಡಿಸಿದ ವಿವಿಧ ರಾಜ್ಯಗಳ ನೃತ್ಯ ಪ್ರದರ್ಶನ ಅಪಾರ ಮೆಚ್ಚುಗೆ ಪಡೆಯಿತು.

ಆರಂಭದಲ್ಲಿ ಜಂಟಿ ಕಾರ್ಯದರ್ಶಿ ಶ್ರೀಮತಿ ಪೂಜಾ ರಾವ್ ಅವರು ಪ್ರಾಸ್ತವಿಕವಾಗಿ ಮಾತನಾಡಿದರು. ಉಪಾಧ್ಯಕ್ಷೆ ಶ್ರೀಮತಿ ಜಮುನಾ ಸಿ. ಮಠದ ಮತ್ತು ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಸುಮಿತಾ ಮುರಗೋಡ ಅತಿಥಿಗಳನ್ನು ಪರಿಚಯಿಸಿದರು. ಕೋಶಾಧಿಕಾರಿ ಶ್ರೀಮತಿ ಆಶಾಲತಾ ಎಂ ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು.

*ಅರಾ*






**ಶ್ರೀಮತಿ ಶ್ಯಾಮಲಾ ಎಸ್. ಕುಂದರ್ ಮತ್ತು ಶ್ರೀಮತಿ ಪುನೀತ ಅವರನ್ನು ದೆಹಲಿ ಕರ್ನಾಟಕ ಸಂಘ ಅಭಿನಂದಿಸಿತು**

# ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ
# ಸಾಂಸ್ಕೃತಿಕ ಕಾರ್ಯಕ್ರಮದ ಚಿತ್ರಗಳು


















ಸಂಸ್ಕೃತಿ ಸೌರಭ ತಂಡದ ವಿದ್ಯಾರ್ಥಿ ಕಲಾವಿದರನ್ನು ದೆಹಲಿಗೆ ಕರೆತಂದ ಉಪನ್ಯಾಸಕ ಬಾಲಕೃಷ್ಣ ಪೈ ಮತ್ತು ಕಲಾವಿದರನ್ನು ಅಭಿನಂದಿಸಲಾಯಿತು

# ಬಾಲಕೃಷ್ಣ ನಾಯ್ಕ್ ಚೆನ್ನೈಗೆ ವರ್ಗ



ದೆಹಲಿ ಕರ್ನಾಟಕ ಸಂಘದ ಸಕ್ರಿಯ ಸದಸ್ಯ ಬಾಲಕೃಷ್ಣ ನಾಯ್ಕ್ ಡಿ. ಅವರು ವೃತ್ತಿ ಸಂಬಂಧ ಚೆನ್ನೈಗೆ ವರ್ಗವಾಗಿದ್ದಾರೆ. ದಿನಾಂಕ 23.03.2019ರಂದು ಸಂಜೆ ದೆಹಲಿ ಕರ್ನಾಟಕ ಸಂಘವು ಅವರನ್ನು ಗೌರವಿಸಿ ಆತ್ಮೀಯವಾಗಿ ಬೀಳ್ಕೊಟ್ಟಿತ್ತು. ಈ ಸಂದರ್ಭದಲ್ಲಿ ಸಂಘದ ಆಜೀವ ಸದಸ್ಯರೂ ಆಗಿರುವ ಬಾಲಕೃಷ್ಣ ನಾಯ್ಕ್ ಅವರ ಪತ್ನಿ ಶ್ರೀಮತಿ ಅನಿತಾ ನಾಯ್ಕ್ ಮತ್ತು ಪುತ್ರ ಚೈತನ್ಯ ಜೊತೆಗಿದ್ದರು.

ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಮಾತನಾಡಿ ಕವಿ ಮತ್ತು ರಂಗಕರ್ಮಿಯಾಗಿ ಬಾಲಕೃಷ್ಣ ನಾಯ್ಕ್ ಅವರು ಕ್ರಿಯಾಶೀಲರಾಗಿದ್ದರು. ಸುಮಾರು ಐದು ವರ್ಷಗಳಿಗೂ ಹೆಚ್ಚು ಕಾಲ ಸಂಘದ ಮುಖವಾಣಿ 'ಅಭಿಮತ' ಪತ್ರಿಕೆಯ ಪ್ರಧಾನ ಸಂಪಾದಕರಾಗಿ ಅವರು ವಿಶೇಷ ಸೇವೆ ಸಲ್ಲಿಸಿದ್ದಾರೆ. ರಾಜಧಾನಿಯಲ್ಲಿ ಅವರ ಕನ್ನಡ, ತುಳು ಚಟುವಟಿಕೆಗಳು ಅಭಿನಂದನೀಯ ಎಂದು ಶ್ಲಾಘಿಸಿ ಶುಭ ಹಾರೈಸಿದರು.

ಬಾಲಕೃಷ್ಣ ದೆಹಲಿಯ ಬದುಕಿನ ಬೌದ್ಧಿಕ ಸಂಗಾತಿಯಾಗಿದ್ದರು. ರಂಗಕರ್ಮಿಯಾಗಿ ಅವರು ನಿರ್ದೇಶಿಸಲು ಆಯ್ಕೆ ಮಾಡುತ್ತಿದ್ದ ನಾಟಕಗಳೂ ವಿಶೇಷವಾಗಿತ್ತು ಎಂದು ಮಾಜಿ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಸ್ಮರಿಸಿದರು.

ನಾವು ಆರಂಭಿಸಿದ 'ದೆಹಲಿ ಮಿತ್ರ'ದ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದ ಬಾಲಕೃಷ್ಣ ಅವರು ನಾನು ಅಧ್ಯಕ್ಷನಾಗಿದ್ದ ದಿನಗಳಲ್ಲಿ ಸೂಕ್ತವಾದ ಸಲಹೆಗಳನ್ನು ನೀಡಿ ಸಹಕರಿಸುತ್ತಿದ್ದರು ಎಂದು ನಿಕಟಪೂರ್ವ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ನೆನಪಿಸಿಕೊಂಡರು.

'ಅಭಿಮತ'ಕ್ಕೆ ಹೊಸ ವಿನ್ಯಾಸ ನೀಡುವಲ್ಲಿ ಅವರ ಪಾತ್ರ ಮತ್ತು ಅವರೊಂದಿಗಿನ ಅನುಭವಗಳನ್ನು ಪ್ರಕಾಶ್ ಶೆಟ್ಟಿ ಉಳೆಪ್ಪಾಡಿ ಆಪ್ತವಾಗಿ ವಿವರಿಸಿದರು.

ಬಾಲಕೃಷ್ಣ ಅವರ ಒಡನಾಟ, ಬಹುಮುಖ ಆಸಕ್ತಿಗಳ ಕುರಿತು ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಖಜಾಂಚಿ ಆಶಾಲತಾ ಎಂ., ಹಿರಿಯರಾದ ಡಾ. ಅಹಲ್ಯಾಚಿಂತಾಮಣಿ, ಕೆ.ಎಸ್.ಜಿ. ಶೆಟ್ಟಿ ಮತ್ತು ಸರವು ಕೃಷ್ಣ ಭಟ್ ಮೊದಲಾದವರು ಮಾತನಾಡಿದರು.

ಸಂಘಕ್ಕೆ ಕೃತಜ್ಞತೆ ಹೇಳಿದ ಬಾಲಕೃಷ್ಣ ನಾಯ್ಕ್ ಡಿ. ಅವರು "ಸಂಘ ಎಂಬುದು ಮುಖ್ಯ. ದೆಹಲಿ ಕರ್ನಾಟಕ ಸಂಘ ಬೇರೆ ಸಂಘಗಳಿಗಿಂತ ಭಿನ್ನವಾಗಿದೆ. ನನ್ನಂತೆ ಹಲವರ ಪ್ರತಿಭೆ ಮತ್ತು ಆಸಕ್ತಿಗಳಿಗೆ ಅವಕಾಶ ನೀಡಿದೆ. ಸಂಘ ಇನ್ನಷ್ಟು ಬೆಳೆಯಲಿ" ಎಂದು ಆಶಿಸಿದರು.

ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು.

*ಅರಾ*

## ದೆಹಲಿಯ ಸಾಂಸ್ಕೃತಿಕ ಚಟುವಟಿಕೆಗಳ ಶಕ್ತಿ

ಕಳೆದ ಇಪ್ಪತ್ತೈದು ವರ್ಷಗಳಿಂದ ದೆಹಲಿಯ ಸಾಂಸ್ಕೃತಿಕ ಚಟುವಟಿಕೆಗಳ ಭಾಗವಾಗಿದ್ದ ಶ್ರೀ ಬಾಲಕೃಷ್ಣ ನಾಯ್ಕ್ ಅವರು ಇದೀಗ ದೆಹಲಿ ಬಿಟ್ಟು ಚೆನ್ನೈಗೆ ಹೊರಟಿದ್ದಾರೆ. ಅವರಿಗೆ ಒಳಿತಾಗಲಿ.

ಬಾಲಕೃಷ್ಣ ಅವರು ಮುಖ್ಯವಾಗಿ ರಂಗಭೂಮಿಯಲ್ಲಿ ಆಸಕ್ತರು. ಮಂಡಿ ಹೌಸ್‌ನ ಅನೇಕ ಥಿಯೇಟರ್‌ಗಳಲ್ಲಿ ಆಗಾಗ ಕಾಣಸಿಗುವ ಕೆಲವೇ ಕೆಲವು ಕನ್ನಡಿಗರಲ್ಲಿ ಅವರೊಬ್ಬರು. ಕರ್ನಾಟಕ ಸಂಘಕ್ಕೆ ಅವರು 'ಮೆಸೇಜ್ ಬಂತು', 'ಗಡಿಯಂಕ ಕುಡಿಮುದ್ದ' ಮತ್ತು 'ಅಂತಿಗೊನೆ'ಯಂಥ ಒಳ್ಳೆಯ ನಾಟಕಗಳನ್ನು ಯಶಸ್ವಿಯಾಗಿ ನಿರ್ದೇಶಿಸಿದರು. ಕವಿ ಹೃದಯದ ಅವರು 'ಬೆಳಕಿನ ಪಾದ' ಎಂಬ ಕವನ ಸಂಕಲನವನ್ನೂ ಪ್ರಕಟಿಸಿದ್ದಾರೆ. ಕರ್ನಾಟಕ ಸಂಘದ ಅಭಿಮತ ಪತ್ರಿಕೆಯನ್ನು ಸುಮಾರು ಐದು ವರ್ಷಗಳ ಕಾಲ ಸಂಪಾದಿಸಿಕೊಟ್ಟಿದ್ದಲ್ಲದೆ ಪತ್ರಿಕೆಗೆ ಸಾಹಿತ್ಯಿಕ ಆಯಾಮವನ್ನೂ ಕೊಟ್ಟರು. ಆ ಕಾಲದಲ್ಲಿ ಅವರು ಬರೆದ ಸಂಪಾದಕೀಯಗಳು ಸಮಕಾಲೀನ ಘಟನೆಗಳನ್ನು ಜನಪರವಾಗಿ ಹೇಗೆ ವಿಶ್ಲೇಷಿಸಬಹುದು ಎಂಬುದಕ್ಕೆ ಒಳ್ಳೆಯ ಉದಾಹರಣೆ. ಅನೇಕ ತುಳು ಕಾರ್ಯಕ್ರಮಗಳ ಯಶಸ್ಸಿನ ಹಿಂದಿನ ಸೂತ್ರಧಾರಿಯೂ ಅವರೇ.

ಬಾನಾಡಿ ಹೆಸರಿನಿಂದ ಬರೆಯುತ್ತಿದ್ದ ಅವರು ಸದಾ ತೆರೆಯ ಹಿಂದೆಯೇ ಉಳಿವ ವ್ಯಕ್ತಿಯಾಗಿದ್ದರು. ಅವರ ಶ್ರೀಮತಿ ಅನಿತಾ ನಾಯಕ್ ಅವರು ಕೂಡಾ ದೆಹಲಿ ಕನ್ನಡಿಗರ ಬದುಕಿನ ಭಾಗವಾಗಿಯೇ ಬೆಳೆದರು. ಅವರ ಕಿರಿಯ ಮಗ ಚೇತನ್-ಚೇತು ಅಂತಿಗೊನೆ ನಾಟಕದಲ್ಲಿ ಅಂಥ ಭವಿಷ್ಯಕಾರನಿಗೆ ಕಣ್ಣು ಕೊಡುವ ಹುಡುಗನಾಗಿದ್ದ. ದೆಹಲಿ ಕನ್ನಡಿಗರ ಎಲ್ಲ ಚಟುವಟಿಕೆಗಳ ಹಿಂದಿನ ದೊಡ್ಡ ಶಕ್ತಿಗಳು ಈ ದಂಪತಿಗಳು.

ದೆಹಲಿ ಬದುಕಿನ ಬೌದ್ಧಿಕ ಸಂಗಾತಿಯಾಗಿಯಾಗಿದ್ದ ಬಾಲಕೃಷ್ಣ ಅವರ ಜಾಗವನ್ನು ತುಂಬ ಬಲ್ಲವರು ಕಡಿಮೆ. ಅವರ ಗೆಳೆತನದ ಲಾಭ ನನಗಾಗಿದೆ. ಅವರಿಗೆ ಕೃತಜ್ಞತೆಗಳು.

*ಡಾ. ಪುರುಷೋತ್ತಮ ಬಿಳಿಮಲೆ*

# ಮಾತೃಭಾಷೆ ಬೆಳೆಸುವಲ್ಲಿ ತಾಯಿಯ ಪಾತ್ರ ಮಹತ್ವಪೂರ್ಣ



**- ಶುಭಾ ಕುಮಾರಿ**

ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು ದೆಹಲಿ ಘಟಕದ ಆಶ್ರಯದಲ್ಲಿ ನವದೆಹಲಿಯ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ವಿಶ್ವ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಮುಖ್ಯ ಅತಿಥಿ ನವದೆಹಲಿಯ ಕರ್ನಾಟಕ ಭವನದ ಸಹಾಯಕ ಸಮನ್ವಯಾಧಿಕಾರಿ ಶ್ರೀಮತಿ ಶುಭಾ ಕುಮಾರಿ ಅವರು ಮಾತನಾಡುತ್ತಾ, ಮಕ್ಕಳಲ್ಲಿ ಮಾತೃಭಾಷೆಯ ಪ್ರೇಮ ಬೆಳೆಸುವಲ್ಲಿ ತಾಯಿಯ ಪಾತ್ರ ಮಹತ್ವದ್ದಾಗಿದೆ. ಮಹಿಳೆಯರು ಎಲ್ಲಾ ಕ್ಷೇತ್ರದಲ್ಲೂ ಮುಂದಿದ್ದಾರೆ. ಸಮಾಜದ ಬೆಳವಣಿಗೆಯಲ್ಲಿ ಮಹಿಳೆಯ ಪಾತ್ರ ಅಮೂಲ್ಯವಾದದ್ದಾಗಿದೆ. ಮಕ್ಕಳ ಸೃಜನಶೀಲತೆಗೆ ಸಾಹಿತ್ಯದ ಮೂಲಕ ಪ್ರೋತ್ಸಾಹ ನೀಡಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ದೆಹಲಿ ಕರ್ನಾಟಕ ಸಂಘದ ಖಜಾಂಚಿಗಳು ಹಾಗೂ ದೆಹಲಿ ಮೆಟ್ರೋದ ಡೆಪ್ಯುಟಿ ಸ್ಟೇಶನ್ ಮ್ಯಾನೇಜರ್ ಶ್ರೀಮತಿ ಆಶಾಲತಾ ಎಂ. ಅವರು ಮಾತನಾಡಿ ಪ್ರತಿಯೊಬ್ಬ ಮಹಿಳೆ ಎಲ್ಲಾ ಕ್ಷೇತ್ರಗಳಲ್ಲಿ ತನ್ನದೆಯಾದ ವಿಶೇಷತೆಯನ್ನು ಹೊಂದಿರುತ್ತಾಳೆ. ಜೀವನದಲ್ಲಿ ಮಹಿಳೆಯು ಹಲವಾರು ರೂಪಗಳಲ್ಲಿ ಸಮಾಜಕ್ಕೆ ತನ್ನ ಕೊಡುಗೆಯನ್ನು ನೀಡುತ್ತಾ ಬರುತ್ತಿದ್ದಾಳೆ.



**ಶ್ರೀಮತಿ ಶುಭಾ ಕುಮಾರಿ**

ಇಂತಹ ಕಾರ್ಯಕ್ರಮಗಳ ಮೂಲಕ ಮಕ್ಕಳಲ್ಲಿ ಕನ್ನಡ ವಾತಾವರಣವನ್ನು ಸೃಷ್ಟಿಸುವ ಕೆಲಸ ಶ್ಲಾಘನೀಯ ಎಂದು ಹೇಳಿದರು.

ಅತಿಥಿಗಳಾಗಿ ಭಾಗವಹಿಸಿದ ಸಾಹಿತ್ಯಾಸಕ್ತರೂ ಆದ ಶ್ರೀಮತಿ ಎಂ.ಬಿ. ಶಾರದಾ ಹಾಗೂ ಶ್ರೀಮತಿ ವಿನುತಾ ರಮೇಶ ಅವರು ಮಾತನಾಡಿದರು.

ದೆಹಲಿ ಘಟಕದ ಅಧ್ಯಕ್ಷ ಅರವಿಂದ ಬಿಜ್ಜೈ, ಪ್ರಧಾನ ಕಾರ್ಯದರ್ಶಿ ಗಣೇಶ ಹೆಗಡೆ, ಖಜಾಂಚಿ ಅಮರೇಶ, ಉಪಾಧ್ಯಕ್ಷ ಎಚ್.ಎಸ್ ತೇಲಿ, ಪರಿಷತ್ತಿನ ಗೌರವ ಸಲಹೆಗಾರರಾದ ಹಾಗೂ ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಪಾಲಕರು ಮತ್ತು ಪರಿಷತ್ತಿನ ಸದಸ್ಯರಾದ ಶ್ರೀಮತಿ ಮಾಲಿನಿ ಪ್ರಹ್ಲಾದ್, ಕೃಷ್ಣರಾಜ್ ಮತ್ತಿತರರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಶ್ರೀಮತಿ ರೇಖಾ ಅವರು ಸ್ವಾಗತಿಸಿದರು. ಶ್ರೀಮತಿ ಲಾವಣ್ಯ ಬಸವರಾಜು ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀಮತಿ ಜಿ.ಸಿ ರಂಜಿನಿ ಅವರು ನಿರೂಪಿಸಿದರು. ಅರವಿಂದ ಬಿಜ್ಜೈ ಅವರು ವಂದಿಸಿದರು.

ಶ್ರೀಮತಿ ರೀನಾ ಕುರ್ಮೋಳಿ ಹಾಗೂ ತಂಡದವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭಗೊಂಡಿತು. ಕು। ಸುಶ್ಮಿತಾ ಸುವರ್ಣ, ಕು। ಶ್ರೇಯಾ ಎಚ್. ತೇಲಿ, ಕು। ಆಶಾ ಇವರು ಕವಿತೆ ವಾಚನ ಮಾಡಿದರು. 'ನನ್ನ ಆದರ್ಶ ಮಹಿಳೆ–ಸಾಲು ಮರದ ತಿಮ್ಮಕ್ಕ' ಕುರಿತಾಗಿ ಕು। ಮಹೇಶ್, ನನ್ನ ಆದರ್ಶ ಮಹಿಳೆ ಡಾ. ಸುಧಾ ಮೂರ್ತಿ ಕುರಿತು ಕು। ಪಾರ್ವತಿ ಎಸ್., ಹಾಗೂ 'ನನ್ನ ಸ್ಫೂರ್ತಿ ನನ್ನ ಅಮ್ಮ' ಕುರಿತು ಕು। ವೈಷ್ಣವಿ, ಕು। ಕುಶಾಲ್ ಎಂ., ಕು। ಸಮಿತ್ ಬಿ.ಆರ್., ಕು। ಅಭಿಷೇಕ್ ಉಬಾಳೆ, ಕು। ರೋಹನ್ ಹಾಗೂ ಕು। ಸೌರಭ್ ಕುರ್ಮೋಳಿ ಇವರು ಮಾತನಾಡಿದರು. ಮಹಿಳೆಯರು ಹಾಗೂ ಮಕ್ಕಳಿಗಾಗಿ ವಿವಿಧ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

*ಅರವಿಂದ ಬಿಜ್ಜೈ*



**ದೆಹಲಿ ತುಳುಸಿರಿಯು ಚೆನ್ನೈಗೆ ವರ್ಗವಾದ ಶ್ರೀ ಬಾಲಕೃಷ್ಣ ನಾಯ್ಕ್ ಅವರನ್ನು ದಿನಾಂಕ 23.03.2019ರಂದು ಆತ್ಮೀಯವಾಗಿ ಬೀಳ್ಕೊಟ್ಟಿತ್ತು. ಈ ಸಂದರ್ಭದಲ್ಲಿ ದೆಹಲಿ ತುಳುಸಿರಿ ಅಧ್ಯಕ್ಷ ಶ್ರೀ ಕೆ.ಆರ್. ರಾಮಮೂರ್ತಿ, ಮಾಜಿ ಅಧ್ಯಕ್ಷರಾದ ಡಾ. ಅವನೀಂದ್ರನಾಥ್ ರಾವ್ ಮತ್ತು ಡಾ. ಪುರುಷೋತ್ತಮ ಬಿಳಿಮಲೆ, ಪತ್ರಕರ್ತ ರಾಕೇಶ್ ಎನ್.ಎಸ್., ಸರವು ಕೃಷ್ಣ ಭಟ್. ಬಿ.ವಿ. ಬಲ್ಲಾಳ್ ಮೊದಲಾದವರು ಹಾಜರಿದ್ದು ಮಾತನಾಡಿದರು.**

# ಸ್ನೇಹಾ ಅಸೋಸಿಯೇಶನ್‌ನಿಂದ ಮಹಿಳಾ ದಿನಾಚರಣೆ



ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ದಿನಾಂಕ 13.03.2019 ರಂದು ಸಡಗರದಿಂದ ಆಚರಿಸಿತು.

ಮುಖ್ಯ ಅತಿಥಿಯಾಗಿ ಭಾರತ ಸರ್ಕಾರ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದ ಕಲ್ಯಾಣಾಧಿಕಾರಿ ಶ್ರೀಮತಿ ರಂಜನಿದಾಸ್ ಆಗಮಿಸಿದ್ದರು. ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನ ಅಧ್ಯಕ್ಷೆ ಶ್ರೀಮತಿ ರಂಗಮಣಿ ರಾವ್ ಅವರು ಮುಖ್ಯ ಅತಿಥಿಯನ್ನು ಮತ್ತು ಕಾರ್ಯಕ್ರಮಕ್ಕೆ ಆಗಮಿಸಿದ ಜನಕಪುರಿ ಮಹಿಳಾ ಮಂಡಳ ಸದಸ್ಯರು, ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್ ಸದಸ್ಯರುಗಳನ್ನು ಸ್ವಾಗತಿಸಿದರು.

ಶ್ರೀಮತಿ ಲೀಲಾವತಿಯವರಿಂದ ಮಹಿಳಾ ದಿನಾಚರಣೆಯ ಕುರಿತ ಮಾಹಿತಿಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಶ್ರೀಮತಿ ಮಾಲತಿ ರಾಜ್ ಅವರು ಪ್ರಾರ್ಥನೆ ಹಾಡಿದರು.

ಶ್ರೀಮತಿ ರಂಜನಿದಾಸ್ ಅವರು, ಅವರ ವೃತ್ತಿಯಲ್ಲಿ ಎದುರಿಸಿದ ಕಷ್ಟ, ನಷ್ಟಗಳು ಮತ್ತು ಅನುಭವಗಳನ್ನು ಹಂಚಿಕೊಂಡರು. ದೇಶದ ಮಹಿಳೆಯರ ಕಷ್ಟ-ಸುಖಗಳು, ಸಮಸ್ಯೆಗಳ ಬಗ್ಗೆ ವಿವರಿಸಿದರು. ಸಮಾಜದಲ್ಲಿ ಯಾವ ರೀತಿ ಮಹಿಳೆಯರು ಮುಂದುವರಿಯುತ್ತಿದ್ದಾರೆ ಎಂಬುದನ್ನು ವಿವರಿಸಿದರು ಹಾಗೂ ದಕ್ಷಿಣ ಭಾರತದ ಮಹಿಳೆಯರ ಸಾಧನೆ ಬಗೆಗೆ ಬಹಳ ಗೌರವವಿದೆ ಎಂದು ಹೇಳಿದರು.

ಸ್ನೇಹಾ ಅಸೋಸಿಯೇಶನ್ ಹಲವಾರು ವರ್ಷಗಳಿಂದ ಮಹಿಳಾ ದಿನಾಚರಣೆಯಂದು ಮಹಿಳಾ ಸಾಧಕಿಯರನ್ನು ಸನ್ಮಾನಿಸುತ್ತಾ ಬಂದಿದೆ. ಅದರ ಅಂಗವಾಗಿ, ಕಾರ್ಯಕ್ರಮದಲ್ಲಿ ಡಾ. ಅಹಲ್ಯಾಚಿಂತಾಮಣಿ ಅವರನ್ನು ಶಾಲು ಹೊದಿಸಿ, ಶ್ರೀಮತಿ ರಂಗಮಣಿಯವರು ಸನ್ಮಾನಿಸಿದರು.

ಶ್ರೀಮತಿ ಅಹಲ್ಯಾರವರು ತಮ್ಮ ಎಂಬತ್ತು ವರ್ಷಗಳ ಜೀವನದ ಸಿಹಿ-ಕಹಿ ಅನುಭವನಗಳನ್ನು ಹಂಚಿಕೊಂಡರು. ಶ್ರೀಮತಿ ಶೋಭಾ ನಾಗರಾಜ ಅವರು ಮಹಿಳೆಯ ಜೀವನದ ಹಂತಗಳು ಮತ್ತು ತಾವು ಹೇಗೆ ಮಗಳಾಗಿ, ಹೆಂಡತಿಯಾಗಿ, ತಾಯಿಯಾಗಿ ಕಂಡ ಅನುಭವಗಳನ್ನು ವಿವರಿಸಿದರು.

ಶ್ರೀಮತಿ ಶೋಭಾ ಗೌಡರು ವಂದನಾರ್ಪಣೆ ಸಲ್ಲಿಸಿದರು.

*ಲೀಲಾವತಿ ಗುರುಪ್ರಸಾದ್*

# ಗುರುಗ್ರಾಮ ಕನ್ನಡ ಸಂಘದ 2019-21ನೇ ಸಾಲಿನ ನೂತನ ಪದಾಧಿಕಾರಿಗಳು



**ಸಾಯಿಪ್ರಸಾದ್ ಹೆರಂಜಾಲ್**

ರಾಷ್ಟ್ರದ ರಾಜಧಾನಿಯಿಂದ ಸುಮಾರು 30 ಕಿ.ಮಿ. ದೂರದಲ್ಲಿ ಇರುವ ನಗರ ಗುರುಗ್ರಾಮ. ಕರ್ನಾಟಕದಿಂದ ವಲಸೆ ಬಂದು ನೆಲೆ ನಿಂತ ಕನ್ನಡಿಗರ ಬಗೆಗೆ, ಉದ್ಯೋಗ ನಿಮಿತ್ತ ಹೀಗೆ ಬಂದು ಕೆಲವು ವರ್ಷಗಳನ್ನು ಕಳೆದು ಕನ್ನಡದ ಕಂಪನ್ನು ಹರಡಿ ಮತ್ತೆ ತಾಯ್ನಾಡಿಗೆ ತೆರಳಿದ ಕನ್ನಡಿಗರ ಕುರಿತು ಮಾತ್ರವಲ್ಲದೆ ಹಲವು ವರ್ಷಗಳ ಕಾಲ ಗುರುಗ್ರಾಮದಲ್ಲಿ ವಾಸಿಸಿ ಇಲ್ಲಿನ ಬಹು ಸಂಸ್ಕೃತಿಯೊಂದಿಗೆ, ಬಹು ಭಾಷೆಗಳನ್ನಾಡುವ ಜನರೊಂದಿಗೆ ಕಲೆತು ಅವರೊಂದಿಗೆ ತಾವೂ ಒಬ್ಬರಾಗಿ ತನ್ನತನವನ್ನು ಕಳೆದುಕೊಳ್ಳದೆ ಮೂಲ ಸಂಸ್ಕೃತಿಯನ್ನು ಕಾಪಾಡಿಕೊಂಡು ಅಭಿವೃದ್ಧಿಪಡಿಸುತ್ತಾ, ಕನ್ನಡಕ್ಕಾಗಿ ಟೊಂಕ ಕಟ್ಟಿ ನಿಂತ ಕನ್ನಡಿಗರ ಕತೆಯನ್ನು ಎತ್ತಿ ಹೇಳುವಂತೆ ಮಾಡುತ್ತಾ ಬೆರಳೆಣಿಕೆಯ ಕನ್ನಡಿಗರು ಒಂದೆಡೆ ಸೇರಿ 1998ರಲ್ಲಿ ಗುರುಗ್ರಾಮ ನಗರದಲ್ಲಿ ಆರಂಭಿಸಿದ ಪುಟ್ಟ ಸಂಘವೊಂದು ಇದೀಗ ನಾಡು, ಹೊರನಾಡು ಹಾಗೂ ವಿದೇಶಗಳಲ್ಲಿ ವಾಸಿಸುವ ಸುಮಾರು ಮಂದಿ ಆಜೀವ ಸದಸ್ಯರನ್ನು ಹೊಂದಿ ಎನ್.ಸಿ.ಆರ್.ನಲ್ಲಿ ಅತ್ಯಂತ ಶಿಸ್ತಿನ ಸಂಘ ಎಂದು ಜನಪ್ರಿಯವಾಗಿದೆ.

ಗುರುಗ್ರಾಮ ಕನ್ನಡ ಸಂಘವು ಸಾಹಿತ್ಯ ಹಾಗೂ ಸಾಂಸ್ಕೃತಿಕ ಸಂಘಟನೆ ಎಂದು ಅಧಿಕೃತವಾಗಿ ನೋಂದಣಿ. ಗುರುಗ್ರಾಮ ನಗರದಲ್ಲಿ ವಿವಿದೆಡೆ ಚದುರಿ ಹೋಗಿರುವ ಕನ್ನಡಿಗರನ್ನು ಒಂದೆಡೆ ಕಲೆ ಹಾಕಿ ಆ ಮೂಲಕ ರಾಜ್ಯದ ವೈವಿಧ್ಯಮಯ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಕ್ತ ವೇದಿಕೆ ಅಗತ್ಯವಿತ್ತು. ಅದಕ್ಕೆ ಅನುಗುಣವಾಗಿ ಸಂಘವನ್ನು ನೊಂದಣಿ ಮಾಡಲಾಯಿತು. ನೊಂದಣಿಯಾದ ಗುರುಗಾಂವ್ ಕನ್ನಡ ಸಂಘವು ಕಾರ್ಯಕಾರಣಿ ಸಮಿತಿಯ ಮೂರು ಅವಧಿಗಳನ್ನು ಪೂರೈಸಿತು.

**ಈಗ ನಾಲ್ಕನೇ ಅವಧಿಗೆ (ಮುಂದಿನ ಎರಡು ವರ್ಷಗಳಿಗೆ) ಆಯ್ಕೆಯಾದ ಸಮಿತಿ ಇಂತಿದೆ.**

**ಅಧ್ಯಕ್ಷ**-ಸಾಯಿಪ್ರಸಾದ್ ಹೆರಂಜಾಲ್, **ಉಪಾಧ್ಯಕ್ಷ**-ಸಾಬುದರ್ಗಾ, **ಉಪಾಧ್ಯಕ್ಷೆ**-ಲಲಿತಾಂಬ ರಾಜೇಶ್, **ಪ್ರಧಾನ ಕಾರ್ಯದರ್ಶಿ**-ಕೃಷ್ಣಪ್ಪ ಎಂ., **ಜಂಟಿ ಕಾರ್ಯದರ್ಶಿ**-ಮಂಜುನಾಥ್ ಆರ್., **ಕೋಶಾಧಿಕಾರಿ**-ಮರಿಬಸಪ್ಪ ಎಂ.

**ಸದಸ್ಯರು** : ಲಕ್ಷ್ಮಣ ಕಟ್ಟೀಮನಿ, ಸಂತೋಷ್ ಕೆ.ಕೆ., ಶರಣ ಬಸಪ್ಪ, ಗೋಪಾಲ್ ತಲ್‌ವಾರ್, ರಮೇಶ್ ಕೆ.ಎಸ್., ಶಾಂತಕುಮಾರ್ ನಿಂಬಾಳ್, ನಾಗೇಶ್ ಆನಂದ್, ನವೀನ್, ಪ್ರಭುಸ್ವಾಮಿ, ಚಿದಂಬರ ಕೋಟೆ.

*ಕೃಷ್ಣಪ್ಪ ಎಂ.*



# ಮುಂಬಯಿ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯಕ್ಕೆ ಚಾಲನೆ

ಮುಂಬಯಿ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯದ ಶಿಲಾನ್ಯಾಸ ಸಮಾರಂಭವು ದಿನಾಂಕ 03.03.2019ರಂದು ಮುಂಬಯಿಯಲ್ಲಿ ನೆರವೇರಿತು. ಈ ಶಿಲಾನ್ಯಾಸ ಸಮಾರಂಭದಲ್ಲಿ ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಸಚಿವ ಯು.ಟಿ. ಖಾದರ್, ಶಾಸಕ ನಾರಾಯಣ ಗೌಡ, ಕರ್ನಾಟಕ ಸರ್ಕಾರದ ಮಾಜಿ ಪ್ರಧಾನ ಕಾರ್ಯದರ್ಶಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾಜಿ ನಿರ್ದೇಶಕ ಐ.ಎಂ. ವಿಠ್ಠಲಮೂರ್ತಿ, ಮುಂಬೈ ಕರ್ನಾಟಕ ಸಂಘದ ಆಮಂತ್ರಣದ ಮೇರೆಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರಾದ ಸಂತೋಷ ಜೆ. ಅವರು ಗೌರವಾನ್ವಿತ ಅತಿಥಿಗಳಾಗಿ ಭಾಗವಹಿಸಿದ್ದರು.

ಕನ್ನಡವನ್ನು ಉಳಿಸಿ, ಬೆಳೆಸಲು ಕರ್ನಾಟಕ ಸರ್ಕಾರ ಬದ್ಧವಾಗಿದೆ. ಕನ್ನಡ ಕೇವಲ ಭಾಷೆ ಅಲ್ಲ, ಒಂದು ಇತಿಹಾಸ ಆಗಿದೆ. ಕನ್ನಡ ಭಾಷೆ ವಿಶಿಷ್ಟ ಸಾಹಿತ್ಯ, ಸಂಸ್ಕೃತಿ ಮತ್ತು ಕಲೆಯನ್ನು ಹೊಂದಿದೆ. ಕನ್ನಡ ಜಾಗತೀಕವಾಗಿ ಚಿರಪರಿಚಿತವಾಗಿ ಬಹುಕಾಲದಿಂದ ಬಾಳಿದೆ. ಕನ್ನಡವನ್ನು ಲೋಕಕ್ಕೆ ಪರಿಚಯಿಸಲು ಇಂತಹ ಸಂಘ ಸಂಸ್ಥೆಗಳ ಸೇವೆ ಅಗತ್ಯವಾಗಿದೆ. ಕನ್ನಡಿಗರ ದೂರದೃಷ್ಟಿತ್ವ ಈ ಸಂಘದ ಸ್ಥಾಪನೆಗೆ ಕಾರಣವಾಗಿದೆ. ಪರಭಾಷೆಗಳನ್ನು ತಿಳಿಯುವುದರಿಂದ ಮಾತ್ರ ನಮ್ಮ ಭಾಷೆಯೂ ಸಹ ವಿಸ್ತಾರವಾಗಿ ಬೆಳೆಯಬಹುದು. ಆ ಮೂಲಕ ಬಹುಭಾಷೆಗಳಿಂದ ಬಲಿಷ್ಠ ಭಾರತವನ್ನು ನಿರ್ಮಾಣ ಮಾಡಲು ಸಾಧ್ಯ. ಭಾಷೆಗಳು ಒಗ್ಗೂಡುವುದರಿಂದ ಸಾಮರಸ್ಯದ ಕೊಂಡಿಯಾಗಿ ಎಲ್ಲ ಸಂಸ್ಕೃತಿಗಳು ಬೆಳೆಯಲು ಸಾಧ್ಯ. ಆದುದರಿಂದ ಭಾಷೆಯ



ಬೆಳವಣಿಗೆ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಸಚಿವ ಯು.ಟಿ. ಖಾದರ್ ಅವರು ತಿಳಿಸಿದರು.

ಬೇರೆ ಬೇರೆ ಸಂಘ ಸಂಸ್ಥೆಗಳ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಪದಾಧಿಕಾರಿಗಳು, ಮುಂಬಯಿ ಕರ್ನಾಟಕ ಸಂಘದ ಅಧ್ಯಕ್ಷ ಮನೋಹರ ಎಂ. ಕೋರಿ, ಪ್ರಧಾನ ಕಾರ್ಯದರ್ಶಿ ಭರತ್ ಕುಮಾರ್ ಪೊಲಿಪು, ಕಟ್ಟಡ ನಿರ್ಮಾಣ ಸಮಿತಿ ಸಂಚಾಲಕ ಓಂದಾಸ್ ಕಣ್ಣಂಗಾರ್ ಉಪಸ್ಥಿತರಿದ್ದರು.

ಈ ಭವನ ನಲ್ವತ್ತು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಎರಡು ವರ್ಷಗಳ ಕಾಲಾವಧಿಯಲ್ಲಿ ನಿರ್ಮಾಣಗೊಳ್ಳಲಿದೆ. ಎಲ್ಲಾ ಸಂಘ ಸಂಸ್ಥೆಗಳು ಸಹಕಾರ ನೀಡಲು ಒಪ್ಪಿಗೆ ನೀಡಿವೆ. ದೆಹಲಿ ಕರ್ನಾಟಕ ಸಂಘವು ಕಾರ್ಯಕಾರಿ ಸಮಿತಿಯಲ್ಲಿ ಚರ್ಚಿಸಿ, ಸೂಕ್ತ ಸಹಕಾರ ನೀಡುತ್ತದೆ ಎಂದು ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ತಿಳಿಸಿದರು.

***ಸಂತೋಷ ಜೆ.***




## ಓದುಗರ ಸ್ಪಂದನ

ಅಭಿಮತ ಹೊಸ ವಿನ್ಯಾಸ, ನೂತನ ಆವಿಷ್ಕಾರಗಳಿಂದ ಮೂಡಿ ಬಂದಿದೆ. ಮುಖಪುಟ ರನ್ನನ ಗದಾಯುದ್ಧ ಮತ್ತು ಬಿಳಿಮಲೆಯವರ ಕುರಿತ ಲೇಖನ, ಪ್ರಶಸ್ತಿಗಳ ಆಯ್ಕೆ ಬಗ್ಗೆ ಸಾಕಷ್ಟು ಸತ್ಯದ ನುಡಿಗಳೊಂದಿಗೆ ಡಾ. ಅವನೀಂದ್ರ ಅವರು ಬೆಳಕು ಚೆಲ್ಲಿದ್ದಾರೆ. ಸಂಪಾದಕರು ವಿಶೇಷ ಶ್ರಮ ವಹಿಸಿ ಓದುಗರಿಗೆ ಹೊಸ ವಿಚಾರ ನೀಡಿದ್ದಾರೆ. ಮುಂದಿನ ಸಂಚಿಕೆ ವಿಶೇಷ ಕಾಲಂಗಳೊಂದಿಗೆ ಮೂಡಿ ಬರಲೆಂದು ಹಾರೈಸುತ್ತೇನೆ. ನೂತನ ಅಧ್ಯಕ್ಷರ ಸಮರ್ಥ ತಂಡಕ್ಕೆ ಅಭಿನಂದನೆಗಳು.


***ನಂದಳಿಕೆ ಬಾಲಚಂದ್ರ ರಾವ್***

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-



**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-



**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)


ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್

ವರ್ಷ : 2014. ರೂ. 100/-




**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ

ವರ್ಷ : 2014. ರೂ. 50/-



**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ

ವರ್ಷ : 2017. ರೂ. 50/-



**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)

ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ

ವರ್ಷ : 2017. ರೂ. 200/-



**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)

ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ

ವರ್ಷ : 2006. ರೂ. 75/-



**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)

ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-




**ನಾನು-ನೀನು**
(ಕವನ ಸಂಕಲನ)

ಸುಧಾಕರ ಕುರಂದವಾಡ
ವರ್ಷ : 2015. ರೂ. 100/-




**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್

ವರ್ಷ : 2017. ರೂ. 50/-



**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ

ವರ್ಷ : 2017. ರೂ. 100/-






ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಮಹಿಳಾ ದಿನಾಚರಣೆ ಸಂದರ್ಭ 'ಸಂಸ್ಕೃತಿ ಸೌರಭ' ತಂಡದ ವಿದ್ಯಾರ್ಥಿ ಕಲಾವಿದ ಸುಜಿತ್ ಅವರು ಹಾಡಿನ ಹಿನ್ನಲೆಯಲ್ಲಿ ರಾಷ್ಟ್ರಕವಿ ಕುವೆಂಪುರವರ ಭಾವಚಿತ್ರವನ್ನು ಸ್ಥಳದಲ್ಲೇ ರಚಿಸಿದ್ದರು. ಆ ಭಾವಚಿತ್ರವನ್ನು ದೆಹಲಿ ಕರ್ನಾಟಕ ಸಂಘಕ್ಕೆ ಕೊಡುಗೆಯಾಗಿ ನೀಡಿದರು.

ರಾಷ್ಟ್ರದ ರಾಜಧಾನಿಯಲ್ಲಿ
ಕನ್ನಡಿಗರೊಬ್ಬರ ಬಹುವರ್ಣದ
ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು
ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ
ಕಾರ್ಯಗಳನ್ನು ಸಮಯಕ್ಕೆ
ಸರಿಯಾಗಿ ಅಚ್ಚುಕಟ್ಟಾಗಿ
ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್,
ಪ್ರಿಂಟಿಂಗ್ ಮತ್ತು ಬೈಂಡಿಂಗ್
ಕೆಲಸಗಳಿಗಾಗಿ ದಯವಿಟ್ಟು
ಸಂಪರ್ಕಿಸಿ

**SAUJANYA**
PRINTING PRESS
A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

Delhi Karnataka Sangha's Abhimatha Monthly,
Apr-2019, Vol. No.29, Issue No.7, Price Rs.1/-
RNI Regn. No. 53405/91, DL-SW-1/4016/19-21
Date of Publication : Apr 8th / 9th, Posting Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022, Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

# Banking has never been this Mobile !

KBL Mobile Plus

- Fund Transfer to own / within Bank Account / KBL QR
- IMPS / NEFT / RTGS Fund Transfer
- Utility Bill Payments / Mobile / DTH Recharge
- UPI Services, KBL M-Passbook & KBL Locator
- Online Deposit Account Opening, Account Statements & Enquiry
- Debit Card Controls
- Online KBL Suraksha Registration
- Donation to Temples - e-Hundi

& much more



conditions apply

Available on
GET IT ON Google Play
Download on the App Store

**Words of precaution to the public**

BEWARE! FAKE SMS SCAM

Governor, RBI or bank or any such other organisation does not send mails or SMSs asking you to deposit money to transfer a large sum of money to your account. Do not be a victim of such frauds.

Call toll free no. 1800 425 1444 or Contact our nearest branch for details    Follow us on / karnatakabank

## Karnataka Bank
Your Family Bank. Across India.

Regd. Head Office: Mangaluru - 575 002    CIN: L85110KA1924PLC001128    E-mail: info@ktkbank.com    Visit us at: www.karnatakabank.com